# ಹಂಪಿ ಟೈಮ್ಸ್

**HAMPI TIMES**
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



**1,25,000 +**
Digital E-PAPER READERS
To book Classified Display Ad
in HAMPI TIMES
Please call on
**9448633038**

No.1 HAMPI TIMES LEADING PRINT & DIGITAL District News Paper



ಸಂಪುಟ:02 • ಸಂಚಿಕೆ: 268 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.05.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 268 • PRGI No:KARKAN/2023/88055 • VIJAYANAGARA • 01.05.2025 • Thursday • Page:04 • Rs:2


### ನಿನಗೆ ನೀನೇ ಬೆಳಕು

ಸಾಧನೆಯ ಹಾದಿಯಲ್ಲಿ ಸವಾಲು, ಕಷ್ಟಗಳು ನಿಶ್ಚಿತ. ಅವನ್ನೆಲ್ಲ ಎದುರಿಸಿ ಯಶಸ್ಸಿನ ಪತಾಕೆ ಹಾರಿಸುವವನೇ ಧೀರ.

– ಜಾರ್ಜ್ ಬರ್ನಾರ್ಡ್ ಷಾ



ಹೊಸಪೇಟೆ ತಾಲೂಕಿನ ಕಮಲಾಪುರ ಪಟ್ಟಣದಲ್ಲಿ ಬುಧವಾರ ಸಂಜೆ ಶ್ರೀ ನಗರೇಶ್ವರ ದೇವರ ರಥೋತ್ಸವ ಅದ್ದೂರಿಯಾಗಿ ಜರುಗಿತು.

# ಮಗಳಿಗೆ ತೋರಿದ ಪ್ರೀತಿ ಸೊಸೆಗೂ ನೀಡಿ

## ಸಾಮೂಹಿಕ ವಿವಾಹ ಸಮಾನತೆಯ ಸಂಕೇತ | ಪರಸ್ಪರ ಅರಿತು ಬಾಳಿದಾಗ ಮನೆಯೇ ದೇವಾಲಯ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಶ್ರೀಗಳಿಂದ ಆಶೀರ್ವಚನ

■ ಹಂಪಿ ಟೈಮ್ಸ್ ಹೊಸಪೇಟೆ

ಮಗಳಿಗೆ ತೋರಿದ ಪ್ರೀತಿಯನ್ನು ಮನೆಗೆ ಬಂದ ಸೊಸೆಗೂ ಪ್ರೀತಿ ತೋರಿದಾಗ ಮನೆಯೇ ದೇವಾಲಯವಾಗುತ್ತದೆ.. ಸೊಸೆಯೂ ಅತ್ತೆಯನ್ನು ತನ್ನ ತಾಯಿಯಂತೆ ಕಾಣುವ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ಶ್ರೀ ಕೊಟ್ಟೂರು ಸಂಸ್ಥಾನ ಮಠದಿಂದ ಶ್ರೀಮಠದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರ 892ನೇ ಜಯಂತಿ ಹಾಗೂ 52 ನೇ ವರ್ಷದ ಉಚಿತ ಸರ್ವಧರ್ಮ ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗಳಿಗೆ ಆಶೀರ್ವದಿಸಿ ಮಾತನಾಡಿದರು.

ಸಾಮೂಹಿಕ ವಿವಾಹಗಳು ಸಮಾಜದಲ್ಲಿ ಸರಳತೆ, ಸಮಾನತೆ ಮತ್ತು ಸಹಬಾಳ್ವೆಯ ಪ್ರತೀಕವಾಗಿವೆ. ಬಸವಣ್ಣನವರ ಆಶಯದಂತೆ ಶ್ರೀಮಠದಲ್ಲಿ ಸರ್ವಧರ್ಮ ಸಾಮೂಹಿಕ ವಿವಾಹಗಳು ನಡೆಯುತ್ತಾ ಬಂದಿವೆ. ನೂತನವಾಗಿ ಮನೆಗೆ ಬರುವ ಸೊಸೆಗೆ



ಮನಸ್ಸು ಭಾರವಾಗದಂತೆ ನಡೆದುಕೊಳ್ಳಬೇಕು. ತವರು ತೊರೆದು ಗಂಡನ ಮನೆ ಬೆಳಗಲು ಬಂದ ಸೊಸೆಗೆ ತವರು ಮರೆಯುವಂತ ಪ್ರೀತಿ ತೋರಿದಾಗ, ಕೋಪ, ತಾಪ ಯಾರಲ್ಲೂ ಕಾಣದೇ ಮನೆಯೇ ಮಂತ್ರಾಲಯವಾಗುತ್ತದೆ. ಒಂದು ದಿನದ ಆಡಂಬರದ ಮದುವೆಗೆ ಲಕ್ಷಾಂತರ ರೂ ಸಾಲ ಮಾಡಿಕೊಂಡಲ್ಲಿ, ಮದುವೆ ನಂತರ ಸಾಲ ತೀರಿಸುವ ಚಿಂತೆಯಲ್ಲಿ ಮುಳುಗಿ ನೆಮ್ಮದಿಯ ಬದುಕನ್ನು ಕಳೆದುಕೊಳ್ಳಬೇಕಾಗುತ್ತದೆ.

ಸಾಮೂಹಿಕ ವಿವಾಹಗಳಲ್ಲಿ ಮದುವೆಯಾದಾಗ ಆರ್ಥಿಕ ಹೊರೆ ತಗ್ಗುವುದರೊಂದಿಗೆ ಗುರು ಹಿರಿಯರ ಆಶೀರ್ವಾದವೂ ಹಾರೈಕೆಗಳು ದೊರೆತು ಬದುಕು ಸುಂದರವಾಗುತ್ತದೆ ಎಂದರು.

ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. 900 ವರ್ಷಗಳ ಹಿಂದೆಯೆ ವಿಶ್ವಗುರು ಬಸವಣ್ಣನವರು ಸಮಾನತೆ ಮತ್ತು ಸ್ತ್ರೀ ಸಮಾನತೆಗಾಗಿ ಹೋರಾಡಿದ್ದರು. ಅವರ ತತ್ವ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡು ಸಾಗಿದರೆ ಎಂತಹ ಕಠಿಣ ಸವಾಲುಗಳನ್ನು ಎದುರಿಸಬಹುದಾಗಿದೆ. ದಾಂಪತ್ಯ ಜೀವನಕ್ಕೆ ಕಾಲಿಟ್ಟ ದಂಪತಿಗಳು ಒಬ್ಬನ್ನೊಬ್ಬರು ಪರಸ್ಪರ ಅರ್ಥಮಾಡಿ ಕೊಂಡು ಜೀವನ ನಡೆಸಬೇಕು. ಜೀವನದಲ್ಲಿ ಎಲ್ಲವನ್ನೂ ತಕ್ಷಣಕ್ಕೆ ಪಡೆಯಲು ಸಾಧ್ಯವಿಲ್ಲ. ತಾಳ್ಮೆಯನ್ನು ಮೈಗೂಡಿಸಿಕೊಂಡು ಮತ್ತೊಬ್ಬರಿಗೆ ಒಳಿತನ್ನು ಬಯಸುತ್ತಾ, ಕಾಯಕನಿಷ್ಠೆಯಲ್ಲಿ ತೊಡಗಿದರೆ ಬದುಕಿನಲ್ಲಿ ನೆಮ್ಮದಿ ಕಾಣಬಹುದು ಎಂದರು.

ಸರ್ವಧರ್ಮ ಸಾಮೂಹಿಕ ವಿವಾಹದಲ್ಲಿ 18 >>3












# ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ-ಭವ್ಯ ಮೆರವಣಿಗೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಅಂಗವಾಗಿ ಬುಧವಾರ ಸಂಜೆ ನಗರದಲ್ಲಿ ಭವ್ಯ ಮೆರವಣಿಗೆ ನಡೆಯಿತು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು.



ಮೆರವಣಿಗೆಯು ನಗರದ ಮುನಿಸಿಪಲ್ ಕಾಲೇಜು ಮೈದಾನದಿಂದ ಆರಂಭಗೊಂಡು ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಬೆಂಗಳೂರು ರಸ್ತೆ, ಹಳೆ ಬ್ರೂಸ್ ಪೇಟೆ ಪೊಲೀಸ್ ಠಾಣೆ ರಸ್ತೆ ಮಾರ್ಗವಾಗಿ ತೇರು ಬೀದಿ ರಸ್ತೆಯ ಮೂಲಕ ಹೆಚ್.ಆರ್.ಗವಿಯಪ್ಪ ವೃತ್ತದಿಂದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ಸಾಗಿ ಬಂದು ಸಂಪನ್ನಗೊಂಡಿತು.

ಮೆರವಣಿಗೆಯಲ್ಲಿ ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ, ತಾಷೆ ರಾಂಡೋಲ್ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಭಾಗವಹಿಸಿ ಮೆರಗು ನೀಡಿದವು ಹಾಗೂ ಮೆರವಣಿಗೆಯಲ್ಲಿ ವಿವಿಧ ಇಲಾಖೆಗಳಿಂದ ಬಸವೇಶ್ವರರ ಕುರಿತ ರೂಪಿಸಿದ ಮಾಹಿತಿ ಫಲಕಗಳನ್ನೊಳಗೊಂಡ ಸ್ತಬ್ಧಚಿತ್ರಗಳು ಆಕರ್ಷಿಸಿದವು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಇತರರು ಇದ್ದರು.

**ಬೈಕ್ ರ್‍ಯಾಲಿ:** ನಗರದಲ್ಲಿ ಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಅಂಗವಾಗಿ ಬುಧವಾರ ಬೆಳಿಗ್ಗೆ ಬೈಕ್ ರ್‍ಯಾಲಿ ನಡೆಯಿತು. ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಮತ್ತು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರ ನೇತೃತ್ವದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಬಳಿಕ ಹೆಚ್.ಆರ್.ಗವಿಯಪ್ಪ ವೃತ್ತದ ಬಳಿಯ ಬಸವೇಶ್ವರರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಇದಕ್ಕೂ ಮುನ್ನ ನಗರದ ಬಸವೇಶ್ವರ ವೃತ್ತದಲ್ಲಿ 1.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಜಗಜ್ಯೋತಿ ಬಸವೇಶ್ವರರ ಪುತ್ಥಳಿ ನಿರ್ಮಾಣ ಕಾಮಗಾರಿಗೆ ಗಣ್ಯರು ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಡಾ.ಬಾಬು ಜಗನ್ ಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಸೇರಿದಂತೆ ಪಾಲಿಕೆಯ ಸದಸ್ಯರು, ಸಮುದಾಯದ ಮುಖಂಡರು ಹಾಗೂ ಅನೇಕರು ಭಾಗವಹಿಸಿದ್ದರು.

## ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಷ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಶತ-ಶತಮಾನಗಳಿಗೂ ಅಚ್ಚಳಿಯದೆ ಬೆಳಗುವ ಚರಿತ್ರೆ ಬಸವ ಜಯಂತಿ

**'ಬ'ಎಂಬಲ್ಲಿ ಎನ್ನ ಭವ ಹರಿಯುತ್ತು**
**'ಸ' ಎಂಬಲ್ಲಿ ಸರ್ವಜ್ಞನಾದೆನು**
**'ವ' ಎಂಬಲ್ಲಿ ವಚಿಸುವಡೆ ಚೈತನ್ಯಾತ್ಮಕನಾದೆನು**
**ಇಂತಿ ಬಸವಾಕ್ಷರತ್ರಯವೆನ್ನ ಸರ್ವಾಂಗದಲ್ಲಿ**
**ತೊಳಗಿ ಬೆಳಗುವ ಭೇದವನರಿದು**
**ಅನೂ ನೀನೂ 'ಬಸವಾ ಬಸವಾ ಬಸವಾ' ಎನುತಿರ್ದೆನಯ್ಯಾ ಗುಹೇಶ್ವರಾ**

ಪ್ರತಿವರ್ಷ ಬಸವ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸುತ್ತ ಬಂದಿದ್ದೇವೆ. ಸರ್ಕಾರಿ ಆದೇಶದಂತೆ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಆಚರಿಸಲಾಗುತ್ತಿದೆ. ಬಸವ ಜಯಂತಿಯ ಮೂಲ ಹೆಜ್ಜೆಗಳನ್ನು ಹುಡುಕುತ್ತಾ ಹೋದರೆ ಅವು ನಮ್ಮನ್ನು ದಾವಣಗೆರೆ ಜಿಲ್ಲೆಗೆ ತಂದು ನಿಲ್ಲಿಸುತ್ತವೆ. ತುಂಗಭದ್ರ ನದಿಯ ಹತ್ತಿರದ ದಾವಣಗೆರೆಯಲ್ಲಿ ಪ್ರಾರಂಭವಾದ ಬಸವ ಜಯಂತಿ ನಾಡಿನಾದ್ಯಂತ ಆಚರಿಸುತ್ತ ಇಂದು ಲಂಡನ್ನಿನ ಥೇಮ್ಸ್ ನದಿಯವರೆಗೂ ತಲುಪಿದೆ. ಥೇಮ್ಸ್ ದಂಡೆಯಲ್ಲಿ ಬಸವಣ್ಣನವರ ಪುತ್ಥಳಿ ಅನಾವರಣಗೊಂಡು ಅನುಭವ ಮಂಟಪದಲ್ಲಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ಹುಟ್ಟು ಹಾಕಿದ ಬಸವಣ್ಣನವರ ತತ್ವಗಳು ಲಂಡನ್ ಮಹಾನಗರದಲ್ಲಿ ಥೇಮ್ಸ್ ನದಿಯ ಅಲೆ ಅಲೆಯಾಗಿ ಧ್ವನಿಸುತ್ತಿವೆ.. ಇದನ್ನು ಸ್ವಾಗತಿಸಿರುವ ಬ್ರಿಟನ್ ಬಸವಣ್ಣನವರ ಪ್ರತಿಮೆಯನ್ನು ಬ್ರಿಟನ್ ಸಂಸತ್ ಭವನದ ಆವರಣದಲ್ಲಿ ಸ್ಥಾಪಿಸಲು 18-11-2015 ರಂದು ಸಂಸತ್ತಿನಲ್ಲಿ ಸರ್ವ ಸಮ್ಮತಿ ಅನುಮೋದನೆ ನೀಡಿ ಅಂಗೀಕರಿಸಿದೆ. ಹೀಗೆ ವಿಶ್ವದ ತುಂಬಾ ಬಸವ ಜಯಂತಿ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ. ಪ್ರಸ್ತುತ ವರ್ಷದಿಂದ ದೆಹಲಿಯ ಸಂಸತ್ ಭವನದಲ್ಲಿ 30-04-2025 ರಂದು ಪ್ರಥಮ ಬಾರಿಗೆ ಬಸವ ಜಯಂತಿಯನ್ನು ಆಚರಿಸುತ್ತಿರುವುದು ಬಸವಣ್ಣನವರು ವಿಶ್ವಗುರುವಿನ ವಾಸ್ತವ ಪರಿಕಲ್ಪನೆಗೆ ಸಾಕ್ಷಿಯಾಗಿದೆ. ಇದರ ಹೆಗ್ಗಳಿಕೆ ಹರ್ಡೇಕರ್ ಮಂಜಪ್ಪನವರಿಗೆ, ಶ್ರೀ ಮೃತ್ಯುಂಜಯ ಶಿವಯೋಗಿಗಳಿಗೆ ಸಲ್ಲುತ್ತದೆ. ಸಮ ಸಮಾಜದ ಕನಸನ್ನು ಕಟ್ಟಿಕೊಂಡು ಅದನ್ನು ಕಾರ್ಯರೂಪಕ್ಕೆ ತಂದ ಮಹಾ ಮಾನವತಾವಾದಿ ಬಸವಣ್ಣನವರ ಜಯಂತಿಯ ಆಚರಣೆ ಹೆಚ್ಚು ಅರ್ಥಪೂರ್ಣತೆ ಪಡೆದುಕೊಳ್ಳುತ್ತಿದೆ.

ಶರಣ ಬಳಗದ ಮುಕುಟ ವಾದ ಅಪ್ಪ ಬಸವಣ್ಣನವರ ವಚನ ಸಾಹಿತ್ಯವನ್ನು, ಕಾಯಕ ತತ್ವವನ್ನು, ಅನುಭವ ಮಂಟಪವನ್ನು, ಸಮ ಸಮಾಜದ ಸಮಾನತೆಯ ಸಿದ್ಧಾಂತವನ್ನು, ಅವರ ಆರ್ಥಿಕ ಸಿದ್ಧಾಂತವಾದ ಕಾಯಕ ದಾಸೋಹದ ತತ್ವವನ್ನು, ಅವರ ಬಹು ಮುಖ ವ್ಯಕ್ತಿತ್ವ ಸಿದ್ಧಾಂತ ಕಾರ್ಯಾಚರಣೆಯನ್ನು ಸಾವಿರಾರು ಸಂಖ್ಯೆಯಲ್ಲಿ ಸಂಶೋಧಕರು, ವಿದ್ವಾಂಸರು, ಸಾಹಿತಿಗಳು ಮೊದಲಾದವರು ನೂರಾರು ವರ್ಷಗಳಿಂದ ಅಧ್ಯಯನ, ಸಂಶೋಧನೆ, ವಿಶ್ಲೇಷಣೆ ವಿಮರ್ಶೆ ಮಾಡುತ್ತಾ ಬಂದಿದ್ದಾರೆ. ಕಳೆದ 900 ವರ್ಷಗಳಿಂದ ಬಸವಣ್ಣನವರ ವ್ಯಕ್ತಿತ್ವ ಯಾರ ಕೈಗೂ ನಿಲುಕದ್ದು. ಅರಿತಷ್ಟು ಅರಿಯುತ್ತಲೇ ಸಾಗುವ ಚೈತನ್ಯದ ಚಿಲುಮೆ. ಇಂತಹ ಮಹಾ ಮಾನವತಾವಾದಿ ಬಸವಣ್ಣನವರು ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು ಕಾರ್ಯನಿರ್ವಹಿಸಿ ಕನ್ನಡ ನಾಡಿನಲ್ಲಿಯೇ ಬಯಲಾದ ನೆಲದಲ್ಲಿರುವ ನಾವೇ ಧನ್ಯರು.



ಡಾ.ರೇಖಾ ಪಾಟೀಲ
ಲೇಖಕಿ, ರಾಯಚೂರು

Scan For Digital Colourful
HAMPI TIMES E-paper

ಬಸವಣ್ಣನವರ ತತ್ವಗಳ ಸಾಕಾರ ರೂಪವಾಗಿ ಅವರ ಜಯಂತಿ ಆಚರಿಸುತ್ತ ಬರಲಾಗುತ್ತಿದೆ. ಕರ್ನಾಟಕ ಸರ್ಕಾರವು ಮೊದಲಬಾರಿಗೆ ದಿನಾಂಕ 20-04-2007



ರಂದು ವಿಧಾನಸೌಧದ ಮುಂದೆ ಬಸವ ಜಯಂತಿಯನ್ನು ಆಚರಿಸಿತು. ಆದರೆ ಸರ್ಕಾರದ ವತಿಯಿಂದ ಆಚರಿಸುವ ಆದೇಶ ಹೊರಡಿಸುವ ಮುನ್ನವೇ 1913ರಿಂದಲೇ ಬಸವ ಜಯಂತಿಯನ್ನು ನಮ್ಮ ನಾಡಿನಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. 112 ವರ್ಷಗಳ ಹಿಂದಿನಿಂದಲೂ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬಂದಿರುವುದು ನಮ್ಮ ನಾಡಿನ ಜನಸಾಮಾನ್ಯರ ಹೆಮ್ಮೆಯಾಗಿದೆ.

ಪ್ರಪ್ರಥಮವಾಗಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಆಚರಿಸಬೇಕೆಂದು ಆಲೋಚಿಸಿ ಕಾರ್ಯರೂಪಕ್ಕೆ ತಂದವರು ಪರಮಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳು ಮತ್ತು ಹರ್ಡೇಕರ್ ಮಂಜಪ್ಪನವರು. ಈ ಸಂದರ್ಭದಲ್ಲಿ ಇಬ್ಬರು ಶರಣರನ್ನು ನೆನೆಯಲೇಬೇಕಾಗಿದೆ. ಮೃತ್ಯುಂಜಯ ಮಹಾಸ್ವಾಮಿಗಳು ದಾವಣಗೆರೆಯ ವಿರಕ್ತಮಠದ ಅಧ್ಯಕ್ಷರಾಗಿದ್ದವರು. ಸಮಾಜ ಪರವಾದ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಹರ್ಡೇಕರ್ ಮಂಜಪ್ಪನವರು ಪೂಜ್ಯರ ಬೆಂಬಲದೊಂದಿಗೆ ಈ ಕಾರ್ಯ ಮುಂದುವರೆಸಿದರು. ಹರ್ಡೇಕರ್ ಮಂಜಪ್ಪನವರು 1906ರಲ್ಲಿ ದಾವಣಗೆರೆಗೆ ಬಂದು ಧನುರ್ಧಾರಿ ವಾರಪತ್ರಿಕೆ ಆರಂಭಿಸಿದರು. ಪೂಜ್ಯರ ಸನ್ನಿಧಿಯಲ್ಲಿ ಇವರ ಸಮಾಜ ಸೇವೆ ಇನ್ನಷ್ಟು ದೃಢವಾಯಿತು. ಪೂಜ್ಯರ ಬೆಂಬಲದಿಂದ 1911ರಲ್ಲಿ ಒಂದು ಭಜನಾ ಮಂಡಳಿ ಆರಂಭಿಸಿದರು. ಶ್ರಾವಣ ಮಾಸದಲ್ಲಿ ಸೋಮವಾರ ಪ್ರವಚನ ಕಾರ್ಯಕ್ರಮ ಏರ್ಪಡಿಸಿ ಜನಜಾಗೃತಿಯಾಗುವಂತೆ ಮಾಡಿದರು. ಇವೆಲ್ಲ ಅವರ ಪ್ರಥಮ ಪ್ರಯೋಗಗಳು. ಮೃತ್ಯುಂಜಯ ಪೂಜ್ಯರು, ಹರ್ಡೇಕರ್ ಮಂಜಪ್ಪನವರು ಹಾಗೂ ದಾವಣಗೆರೆಯ ಪ್ರಮುಖರೊಂದಿಗೆ ಸೇರಿಕೊಂಡು ಆಲೋಚಿಸಿ ಬಸವ ಜಯಂತಿಯನ್ನು ಆಚರಿಸಲು ತೀರ್ಮಾನಿಸಿ ಅಕ್ಷಯ ತೃತೀಯದಂದು ಆಚರಿಸುವ ಉಪಕ್ರಮವನ್ನು 1913ರಲ್ಲಿ ದಾವಣಗೆರೆಯಲ್ಲಿ ಆರಂಭಿಸಿದರು. ದೇಶದಲ್ಲಿ ಇದೇ ಪ್ರಥಮ ಬಸವ ಜಯಂತಿ. ಅಂದು ಬಸವಣ್ಣನವರ ವಚನಗಳನ್ನು ಮುದ್ರಿಸಿ ಜನರಿಗೆ ಹಂಚಿದರು. 1924ರಲ್ಲಿ ಶ್ರೀ ಬಸವೇಶ್ವರ ಚರಿತ್ರೆ ಎಂಬ ಕೃತಿ ಬರೆದು ಪ್ರಕಟಿಸಿದರು. ಈ ಗ್ರಂಥ ಪ್ರಕಟಣೆಯಿಂದ ಬಸವೇಶ್ವರರು ಒಬ್ಬ ರಾಷ್ಟ್ರೀಯ ಮಹಾನುಭಾವರೆಂಬ ಭಾವನೆ ಜನತೆಯಲ್ಲಿ ಬೇರೂರಲು ಸಹಕಾರಿಯಾಯಿತು. 1924ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಕಾರ್ಯನಿರ್ವಹಿಸಲು ಸ್ವಯಂಸೇವಕರ ತಂಡವನ್ನು ಹರಿಹರ ದಾವಣಗೆರೆಗಳಿಂದ ಕರೆದೊಯ್ದರು. ತಾವು ಒಯ್ದ ಪಥಕಕ್ಕೆ "ಬಸವೇಶ್ವರ ಸೇವಾದಳ" ಎಂದು ಹೆಸರಿಟ್ಟರು. 1927ರಲ್ಲಿ ವಿಜಯಪುರ ಜಿಲ್ಲೆಯ ಆಲಮಟ್ಟಿಯಲ್ಲಿ ವೀರಶೈವ ವಿದ್ಯಾರ್ಥಿಗಳಿಗಾಗಿ ಆಶ್ರಮ ಶಾಲೆ ಸ್ಥಾಪಿಸಿ ಅಲ್ಲಿ ವಿಶೇಷ ಜಾಗೃತಿ ಮೂಡಿಸಲು ಸಾಧ್ಯವಾಯಿತು. ಬಂಥನಾಳ ಸ್ವಾಮೀಜಿಯವರು ಮತ್ತು ಫ.ಗು ಹಳಕಟ್ಟಿಯವರು ಅವರಿಗೆ ಬೆಂಬಲವಾಗಿ ನಿಂತರು. "ಶರಣ ಸಂದೇಶ" ಪತ್ರಿಕೆ ಆರಂಭಿಸಿದರು. ಬಸವಣ್ಣನವರ ವಚನಗಳನ್ನು ಪ್ರಕಟಿಸಿ ಜನರ ಜಾಗೃತಿಗೆ ಅದ್ವಿತೀಯ ಕಾಣಿಕೆ ನೀಡಿದರು.

ಹೈದ್ರಾಬಾದ್ ಕರ್ನಾಟಕ ಪ್ರದೇಶದ ನಿಜಾಮನ ಆಳ್ವಿಕೆಯಲ್ಲಿ ಬಸವ ಜಯಂತಿಗೆ ಅವಕಾಶಗಳಿರಲಿಲ್ಲ.ಹೈದ್ರಾಬಾದ್ ಕರ್ನಾಟಕ ಏಕೀಕರಣ ಚಳುವಳಿಯ ಪ್ರಮುಖ ನೇತಾರರಲ್ಲಿ ಒಬ್ಬರಾದ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಯವರು 1924ರಲ್ಲಿ ಯಾದಗಿರಿಯ ಸಂಸ್ಕೃತ ಶಾಲೆಗೆ ಅಧ್ಯಾಪಕರಾಗಿ ಬಂದಮೇಲೆ ಅಲ್ಲಿಯೂ ಬಸವ ಜಯಂತಿಯನ್ನು ಆಚರಿಸುವ ಮೂಲಕ ಹೊಸ ಅಧ್ಯಾಯ ಬರೆದರು. ನಂತರ ಧಾರವಾಡದ ಮೃತ್ಯುಂಜಯ ಸ್ವಾಮಿಗಳ ಮಾರ್ಗದರ್ಶನದಂತೆ 1924ರಲ್ಲಿ "ಭಗವಾನ್ ಬಸವೇಶ್ವರರ ಜಯಂತಿ" ಎಂಬ ಪುಸ್ತಕವನ್ನು ಬರೆದು ಚಂದ್ರಶೇಖರ ಶಾಸ್ತ್ರಿ ಎಂಬ ಗ್ರಂಥಮಾಲೆಯನ್ನು ಆರಂಭಿಸಿ ಪುಸ್ತಕ ಪ್ರಕಟಿಸಿ ಜನರಿಗೆ ಉಚಿತವಾಗಿ ಹಂಚುವ ಮೂಲಕ ಜನರಲ್ಲಿ ಬಸವ ಜಯಂತಿಯನ್ನು ನಾಡಹಬ್ಬವೆಂದು ಆಚರಿಸಿದರು.ಹೀಗೆ ಹೈದ್ರಾಬಾದ್ ಕರ್ನಾಟಕದಲ್ಲಿ ಆಚರಣೆಗೆ ಮುಂದಾದರು. ಬಸವಣ್ಣನವರ ಕುರಿತು ಲೇಖನ, ಭಾಷಣ, ವಚನಗಳ ಪಠಣ ಆಯೋಜಿಸುವ ಮೂಲಕ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬಸವ ಜಯಂತಿಯನ್ನು ಜನಪ್ರಿಯಗೊಳಿಸಿದರು. 1940ರಲ್ಲಿ ಚಂದ್ರಶೇಖರ ಶಾಸ್ತ್ರಿಯವರು ಮೈಸೂರಿನ ಆಕಾಶವಾಣಿ ಕೇಂದ್ರದಲ್ಲಿ ಮೊಟ್ಟಮೊದಲ ಬಾರಿಗೆ ಬಸವೇಶ್ವರ ಜಯಂತಿ ಕುರಿತು ಭಾಷಣ ಮಾಡಿದವರು. 1941 ರಲ್ಲಿ ಜಗಜ್ಯೋತಿ ಬಸವೇಶ್ವರ ಎಂಬ ಚಲನಚಿತ್ರ ಸಹ ಮಾಡಿದ ಹೆಗ್ಗಳಿಕೆ ಇವರದು.

ಬಸವ ಜಯಂತಿ ಹೇಗೆ ಆಚರಿಸಬೇಕೆನ್ನುವುದನ್ನು ಚಂದ್ರಶೇಖರ ಶಾಸ್ತ್ರೀಯವರು ಹೀಗೆ ಬರೆದಿದ್ದಾರೆ. "ಬಸವ ಜಯಂತಿಯ ದಿನ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಬೇಕು. ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಹಾಕಬೇಕು. ಒಂದು ಸಂಶೋಧನಾಲಯವನ್ನು ಸ್ಥಾಪಿಸಬೇಕು. ಬಸವ ಜಯಂತಿ ಆಚರಣೆ ಈಗಿನಕ್ಕಿಂತ ನೂರ್ಮಡಿ ಹೆಚ್ಚಾಗಿ ವಿವಿಧ ವಿಧಾಯಕ ಕಾರ್ಯಗಳು ಜರುಗಿ ಬಸವೇಶ್ವರರ ನಿಜವಾದ ಸ್ಮಾರಕಗಳಾಗ ಬೇಕಾಗಿರುತ್ತದೆ" ಎಂದಿದ್ದಾರೆ. ಹೀಗೆ ಮೃತ್ಯುಂಜಯ ಸ್ವಾಮಿಗಳು, ಹರ್ಡೇಕರ್ ಮಂಜಪ್ಪನವರು, ಚಂದ್ರಶೇಖರ ಶಾಸ್ತ್ರಿಯವರು ನೂರು ವರ್ಷಗಳ ಹಿಂದೆಯೇ ರಾಜ್ಯ- ದೇಶದ ತುಂಬಾ ಬಸವಣ್ಣನವರ ಕೀರ್ತಿಯನ್ನು ಬೆಳಗಿಸಿದವರು.

1913ರಲ್ಲಿ ಮೃತ್ಯುಂಜಯ ಸ್ವಾಮಿಗಳು ಆರಂಭಿಸಿದ ಬಸವ ಜಯಂತಿಗೆ 100 ವರ್ಷ ತುಂಬಿದ ಶತಮಾನೋತ್ಸವ ಸಂದರ್ಭದಲ್ಲಿ ಧಾರವಾಡದ ಮುರುಘಾಮಠವು ಇಡೀ ಒಂದು ವರ್ಷ ನಿರಂತರವಾಗಿ ವಿಶೇಷ ಕಾರ್ಯಕ್ರಮಗಳು, ಪುಸ್ತಕ ಪ್ರಕಟಣೆ, ಸಂವಾದ ಮೊದಲಾದ ಕಾರ್ಯಕ್ರಮಗಳನ್ನು 2013ರಲ್ಲಿ ಹಮ್ಮಿಕೊಂಡು ಬಸವ ಜಯಂತಿ ಶತಮಾನೋತ್ಸವವನ್ನು ಅರ್ಥ ಪೂರ್ಣವಾಗಿ ಆಚರಿಸಿತು. ಅದರ ಸವಿನೆನಪಿಗಾಗಿ "ಯುಗ ಯುಗದ ಉತ್ಸಾಹ" ಎಂಬ ಶತಮಾನೋತ್ಸವ ಸ್ಮರಣ ಸಂಪುಟ ಹೊರತಂದಿತು. ಅದರಲ್ಲಿ 113 ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿರುವುದು ಚರಿತ್ರಾರ್ಹ ಕಾರ್ಯವಾಗಿದೆ.

ನಮ್ಮ ಕರ್ನಾಟಕದ ಘನ ಸರ್ಕಾರ 18-01-2024 ರಂದು ಜಗಜ್ಯೋತಿ ಬಸವಣ್ಣನವರನ್ನು "ಕರ್ನಾಟಕದ ಸಾಂಸ್ಕೃತಿಕ ನಾಯಕ" ಎಂದು ಘೋಷಿಸಿ "ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ" ಎಂಬ ಅಡಿಬರಹದ ಭಾವಚಿತ್ರವನ್ನು ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಅಳವಡಿಸುವ ಮಹತ್ವದ ಕಾರ್ಯ ಕೈಗೊಂಡಿತು. ಕನ್ನಡದ ಸಾಂಸ್ಕೃತಿಕ ಚರಿತ್ರೆಯಲ್ಲಿ ಆಧುನಿಕ ಎನ್ನಿಸಿದ ಬಸವಣ್ಣ ಎಲ್ಲ ಕಾಲಕ್ಕೂ ಸ್ಮರಣೀಯರು. ಇಂತಹ ಮಹಾನ್ ಚೇತನ ಕನ್ನಡದ ಸತ್ವದಲ್ಲಿ ಬಸವ ತತ್ವವನ್ನು ರೂಪಿಸಿಕೊಟ್ಟವರು ಎನ್ನುವುದನ್ನು ನೆನೆದಾಗಲೆಲ್ಲ ಹೆಮ್ಮೆಯೆನಿಸುತ್ತದೆ. ಬಸವ ಜಯಂತಿಯ ಸಂದರ್ಭದಲ್ಲಿ ನಮ್ಮ ನೆಲದ ಬಸವಣ್ಣನವರನ್ನು ಹಾಗೂ ಅವರ ತತ್ವಾದರ್ಶಗಳನ್ನು ಸಂತೋಷದಿಂದ ನೆನೆಯೋಣ.

# ಜಾತಿ, ವರ್ಣ, ಲಿಂಗಭೇದ ವಿರೋಧಿಸಿದ ಬಸವಣ್ಣ

■ **ಹಂಪಿ ಟೈಮ್ಸ್ ಚಿತ್ರದುರ್ಗ**

ಜಾತಿ, ವರ್ಣ ಹಾಗೂ ಲಿಂಗಭೇದಗಳನ್ನು 900 ವರ್ಷಗಳ ಹಿಂದೆಯೇ ವಿರೋಧಿಸಿದ್ದ ಬಸವಣ್ಣನವರ ಆಲೋಚನೆಗಳು ಕಾಂತ್ರಿಕಾರಿಯಾಗಿದ್ದವು ಎಂದು ಜಿಲ್ಲಾ ಪಂಚಾಯಿತಿ ಸಿಇಓ ಎಸ್.ಜೆ.ಸೋಮಶೇಖರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾದ ಸಾಂಸ್ಕೃತಿಕ ನಾಯಕ ಬಸವೇಶ್ವರರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ನೆರವೇರಿಸಿ ಅವರು ಮಾತನಾಡಿದರು.

ಬಸವಣ್ಣವರ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪ ಮತ್ತು ಶರಣ ಶರಣೆಯರ ಸಮಾಜದಲ್ಲಿ ಎಲ್ಲಾ ವರ್ಗದ ಜನಗರಿಗೂ ಪ್ರಾತಿನಿಧ್ಯವಿತ್ತು ಇವತ್ತಿನ ಸಂಸತ್ತಿನ ಮಾದರಿಯಲ್ಲಿಯೇ ಅಂದಿನ ಅನುಭವ ಮಂಟಪ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳಿಗೆ ದಾರಿ ದೀಪವಾಗಿತ್ತು. ಜಗತ್ತು ಇರುವವರೆಗೂ ಬಸವಣ್ಣನವರ ತತ್ವ, ಸಿದ್ಧಾಂತ ಹಾಗೂ ವಿಚಾರಗಳು ಪ್ರಸ್ತುವಾಗುತ್ತವೆ ಎಂದು ಎಸ್.ಜೆ.ಸೋಮಶೇಖರ್ ಹೇಳಿದರು.

ಸರ್ಕಾರ ವೀರಶೈವ ಅಭಿವೃದ್ಧಿ ನಿಗಮ ಸ್ಥಾಪಿಸಿ, ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಒದಗಿಸುತ್ತಿದೆ. ಅಧಿಕಾರಿಗಳು ಈ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ವಿಶ್ವಕ್ಕೆ ಬಸವಣ್ಣನವರ ಚಿಂತನೆಗಳನ್ನು ಪಸರಿಸುವ ದೃಷ್ಟಿಯಿಂದ ಅಂತರಾಷ್ಟ್ರೀಯ ಆಧ್ಯಾತ್ಮಿಕ ಕೇಂದ್ರ ಸ್ಥಾಪನೆಯಾಗಬೇಕು. ಶರಣ ಸಾಹಿತ್ಯದ ಅಪ್ರಕಟಿತ ವಚನಗಳ ಪ್ರಕಟಣೆಯಾಗಿ ಪ್ರಚುರವಾಬೇಕು.



ಈ ಕುರಿತು ಹೆಚ್ಚಿನ ಸಂಶೋಧನೆಗಳ ಅಗತ್ಯವಿದೆ ಎಂದು ಎಸ್.ಜೆ.ಸೋಮಶೇಖರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಮನಗಳಲ್ಲಿ ಬಸವಣ್ಣನವರ ತತ್ವಗಳನ್ನು ಅನಾವರಣ ಮಾಡಿಕೊಳ್ಳಬೇಕು. ಆಗ ಮಾತ್ರ ಸಮಸಮಾಜ ನಿರ್ಮಾಣವಾಗುತ್ತದೆ. ಬಸವಣ್ಣವರ ತತ್ವದಲ್ಲಿ ಕಾಯಕ ಹಾಗೂ ದಾಸೋಹಕ್ಕೆ ಹೆಚ್ಚಿನ ಮಹತ್ವವಿದೆ. ಕಾಯಕ ಎನ್ನುವುದು ಸಂಪತ್ತಿನ ಉತ್ಪಾದಕತೆಯಾದರೆ, ದಾಸೋಹ ಎನ್ನುವುದು ಉತ್ಪಾದನೆಯಾದ ಸಂಪತ್ತಿನ ಸಮಾನ ಹಂಚಿಕೆಯ ತತ್ವವಾಗಿದೆ. ಬಸವಣ್ಣನವರ ನಡೆ ಹಾಗೂ ನುಡಿಯಲ್ಲಿ ಅಂತರವಿರಲಿಲ್ಲ. ನಡೆದ ಹಾಗೆಯೇ ನುಡಿದರು, ನುಡಿದ ಹಾಗೆಯೇ ಬದುಕಿದರು ಎಂದರು.

ಇಂದಿಗೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಬದಲಾಗಿಲ್ಲ. ಇದಕ್ಕೆ ವೀರಶೈವ ಸಮಾಜವೂ ಹೊರತಾಗಿಲ್ಲ. ಸಾದರು, ಬಣಜಿಗರು, ಪಂಚಮಸಾಲಿಗಳು, ಗಾಣಿಕರಾ, ಹೀಗೆ ವಿವಿಧತೆಯಿಂದ ನೋಡುವ ಪರಿಸ್ಥಿತಿಯಿದೆ. ಇಂತಹ ಜಾತಿ ಸಂಕೋಲೆಗಳಿಂದ ಎಲ್ಲರೂ ಹೊರಬರಬೇಕು. ಎಲ್ಲ ಜಾತಿ ಹಾಗೂ ಧರ್ಮಗಳ ಜನರನ್ನು ಎಲ್ಲರೂ ಒಪ್ಪಿಗೊಂಡಾಗಲೇ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಮೂಡಲು ಸಾಧ್ಯ. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಆಯ್ದಕ್ಕಿ ಲಕ್ಕಯ್ಯ, ಡೋಹಾರ ಕಕ್ಕಯ್ಯ, ಮಾದಾರ ಚನ್ನಯ್ಯ, ಸೂಳೆ ಸಂಕವ್ವ ಸೇರಿದಂತೆ ಎಲ್ಲಾ ಜಾತಿ ವರ್ಗದವರು ಇದ್ದರು. ಅಕ್ಕಮಹಾದೇವಿ ಸೇರಿದಂತೆ ಹಲವಾರು ಸ್ತ್ರೀಯರಿಗೂ ಅನುಭವ ಮಂಟಪದಲ್ಲಿ ಸ್ಥಾನವಿತ್ತು. ಸ್ತ್ರೀಯರಿಗೂ ಸಮಾನ ಅವಕಾಶ ನೀಡಿದ ಧರ್ಮ ಸಂಸತ್ತು ಅನುಭವ ಮಂಟಪವಾಗಿದೆ. ವಿಶ್ವ ಸಾಹಿತ್ಯಕ್ಕೆ ಕನ್ನಡದ ಕೊಡುಗೆಗಳಲ್ಲಿ ವಚನ ಸಾಹಿತ್ಯ ಮೇಲ್ಪಂಕ್ತಿಯಲ್ಲಿ ಬರುತ್ತದೆ. ಪಂಡಿತ ಹಾಗೂ ಪಾಮರರೂ ಸಹ ತಮ್ಮ ತಮ್ಮ ಅನುಭವಗಳನ್ನು ವಚನ ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದಾರೆ ಎಂದು ಬಿ.ಟಿ. ಕುಮಾರಸ್ವಾಮಿ ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ ಮಾತನಾಡಿ, 2018 ರಲ್ಲಿ ಸರ್ಕಾರ ಬಸವಣ್ಣವರ ಭಾವಚಿತ್ರವನ್ನು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಅಳವಡಿಸುವಂತೆ ಆದೇಶ ಮಾಡಿತು. ನಂತರದಲ್ಲಿ ಬಸವಣ್ಣವನರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲಾಗಿದೆ. ಬಸವಣ್ಣವರ ಆಶಯಗಳಂತೆ ಸರ್ಕಾರ ಯೋಜನೆಗಳನ್ನು ರೂಪಿಸುತ್ತಿದೆ ಎಂದರು.

ನಗರ ಸಭೆ ಅಧ್ಯಕ್ಷೆ ಸುಮಿತಾ.ಬಿ.ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಉಪವಿಭಾಗಾಧಿಕಾರಿ ಮಹಬೂಬ್ ಜಿಲಾನಿ ಖುರೇಷಿ, ನಗರಸಭೆ ಪೌರಾಯುಕ್ತೆ ರೇಣುಕಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುನಾಥ್, ರಂಗಕರ್ಮಿ ಕೆಪಿಎಂ ಗಣೇಶಯ್ಯ, ಮುಖಂಡರುಗಳಾದ ಪಿ.ವೀರೇಂದ್ರಕುಮಾರ್, ಶಶಿಧರಬಾಬು, ಜಾಲಿಕಟ್ಟೆ ಶಿವರುದ್ರಪ್ಪ, ಜಿ.ಎಸ್.ಉಜ್ಜನಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ನಾನೇ ಸರಿ ಇಲ್ಲ

ನಾನೇ ಸರಿ ಇಲ್ಲ
ಮೂರು ಕೊಟ್ಟರೆ ಈ ಕಡೆ
ಆರು ಕೊಟ್ಟರೆ ಆ ಕಡೆ।

ನಾನೇ ಸರಿ ಇಲ್ಲ
ನಿಮ್ಮನ್ನು ತೆಗಳುವೆ
ಅವರನ್ನು ಓಲೈಸುವೆ।

ನಾನೇ ಸರಿ ಇಲ್ಲ
ಏನೇನೋ ಮಾತಾಡುವೆ
ನಾ ಹಾಗೆ ಹೇಳಿಲ್ಲ ಎನ್ನುವೆ।

ನಾನೇ ಸರಿ ಇಲ್ಲ
ಅಧಿಕಾರದಿ ಮಾತಾಡುವೆ
ವಿರೋಧಿಸಿದವರ ದೂರುವೆ।

ನಾನೇ ಸರಿ ಇಲ್ಲ
ಹುಂ! ಹುಂ! ಅನ್ನುವವರ ಕರೆವೆ
ಬುದ್ಧಿ ಮಾತಿಗೆ ಕಿವಿ ಕೊಡಲಾರೆ।

ನಾನೇ ಸರಿ ಇಲ್ಲ
ನಾ ಹೇಳಿದ್ದೇ ವೇದ ವಾಕ್ಯ
ಒಳಿತು ಕೆಡುಕು ಯೋಚಿಸಲಾರೆ।

ನಾನೇ ಸರಿ ಇಲ್ಲ
ಇನ್ನೊಬ್ಬರ ಕಷ್ಟ ಗೊತ್ತಿಲ್ಲ
ನನಗೂ ಕಷ್ಟ ಗೊತ್ತಿಲ್ಲ।

ನಾನೇ ಸರಿ ಇಲ್ಲ
ನನ್ನನ್ನು ಬೆಂಬಲಿಸುವರು
ಇದ್ದಷ್ಟು ದಿನ ಹಾಯಾಗಿರುವೆ।

ನಾನೇ ಸರಿ ಇಲ್ಲ
ಕುರ್ಚಿಯಿಂದ ಇಳಿದಾಗ
ಹತ್ತಿರ ಯಾರು ಬರಲಾರರು ಗೊತ್ತಿದೆ.

– ಚಂದ್ರಶೇಖರಯ್ಯ ರೋಣದಮಠ.

REQUIRED
Are you passionate about creativity, branding and making ideas come alive?
We're looking for dynamic individuals to join our Advertising & Marketing Team!
POSITION
• Advertising Manager
• Ad Sales Executive
LOCATION
Vijayanagara Dist.
Who can Apply:
• MBA/BBA in Marketing, Mass Communication, related fields
• Experience in media ad sales or Marketing preferred
• Freshers with strong passion for advertising are welcome too!
Submit Your CV and Portofolio :
96866 63125

## ಮಗಳಿಗೆ ತೋರಿದ ಪ್ರೀತಿ ಸೊಸೆಗೂ ನೀಡಿ

ಮೊದ ಪುಟದಿಂದ

ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಬೆಳಿಗ್ಗೆ 6ಕ್ಕೆ 26 ಅಯ್ಯಾಚಾರ ಲಿಂಗದೀಕ್ಷಾ ಕಾರ್ಯ ಜರುಗಿತು.

ಗರಗ ನಾಗಲಾಪುರದ ಶ್ರೀಗಳು, ಸಹಾಯಕ ಆಯುಕ್ತ ವಿವೇಕಾನಂದ, ತಹಶೀಲ್ದಾರ್ ಶೃತಿ ಎಂ. ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಗೊಗ್ಗ ಚನ್ನಬಸವರಾಜ, ಹಿರಿಯ ಮುಖಂಡರಾದ ಸಾಲಿಸಿದ್ದಯ್ಯಸ್ವಾಮಿ, ಕೆ.ರವಿಶಂಕರ, ಎಚ್.ವಿ. ಶರಣುಸ್ವಾಮಿ, ಕೋರಿಶೆಟ್ಟಿ ಲಿಂಗಪ್ಪ, ಎಲ್.ಬಸವರಾಜ, ಮೆಟ್ರಿ ಮಲ್ಲಿಕಾರ್ಜುನ, ಆಶ್ವಿನಿ ಕೋತಂಬ್ರಿ, ನಗರಸಭೆ ಸದಸ್ಯ ಕಿರಣ್ ಶಂಕ್ರಿ, ಎಂ.ಧರ್ಮನಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಮಾರಂಭಕ್ಕೂ ಮುನ್ನ ನಗರದ ಬಸವೇಶ್ವರ ವೃತ್ತದಲ್ಲಿರುವ ಅಶ್ವರೂಢ ಬಸವೇಶ್ವರರಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂಸಿಇಒ ಎನ್.ಎಂ.ಅಕ್ರಮ್ ಅಲಿ ಶಾ, ಜಗದ್ಗುರುಗಳು ಮಾಲಾರ್ಪಣೆ ಮಾಡಿದರು. ಬಸವೇಶ್ವರ ಬಡವಾಣೆಯಲ್ಲಿನ ಬಸವೇಶ್ವರ ಮೂರ್ತಿಗೆ ಪುಷ್ಪಾರ್ಚನೆ ಮಾಡಲಾಯಿತು. ನಗರದ ಡ್ಯಾಂ ರಸ್ತೆಯಲ್ಲಿರುವ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಿಂದ ಶ್ರೀಮಠದವರೆಗೆ ನೂತನ ವಧು-ವರರು ಶ್ರೀ ಬಸವೇಶ್ವರ ಮೆರವಣಿಗೆಯೊಂದಿಗೆ ಹೆಜ್ಜೆ ಹಾಕಿದರು. ಸಮಾಜದ ಹಿರಿಯ ಹಾಗೂ ಯುವ ಮುಖಂಡರು, ಮಹಿಳೆಯರು, ಮಕ್ಕಳು ಮೆರವಣಿಗೆಯುದ್ದಕ್ಕೂ ತಾಳಕ್ಕೆ ಹೆಜ್ಜೆ ಹಾಕಿದರು.

# ಮಹಿಳೆ - ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕಾನೂನಿನ ಅರಿವು ಇರಲಿ

**ಮಕ್ಕಳ ಸಹಾಯವಾಣಿ–1098, ಮಹಿಳಾ ಸಹಾಯವಾಣಿ–1091, ಜಿಲ್ಲಾ ಸಹಾಯವಾಣಿ–1077, ಹಿರಿಯ ನಾಗರಿಕರ ಸಹಾಯವಾಣಿ–1090, ರಾಷ್ಟ್ರೀಯ ತುರ್ತು ಸಹಾಯವಾಣಿ–112, ಅಂತರ್ಜಾಲ ಅಪರಾದ ಸಹಾಯವಾಣಿ–1930**



ಬಹು ದಿನಗಳ ನಂತರ ಮೊನ್ನೆ ಮತ್ತೆ ನನ್ನ ಯಾವತ್ತೂ ಆದರ್ಶ ಮತ್ತು ಆಸಕ್ತಿಯಾದ ಶಿಕ್ಷಕ ವೃತ್ತಿಯ, ನನ್ನೊಳಗಣ ಆ ಅಂಶಗಳು ಜಾಗ್ರತವಾಗಲು ಅವಕಾಶವೊಂದು ಒದಗಿ ಬಂದಿತ್ತು. ಸ ಹಿ ಪ್ರಾ ಶಾಲೆ ಬೇಳೂರ, ಕಾರವಾರದಲ್ಲಿ ನೆಡೆದ "ವನವಾಸಿ ಕಲ್ಯಾಣ ಕರ್ನಾಟಕ" ಇವರು ಆಶ್ರಯದಲ್ಲಿ "ಯುವತೀಯರ ಚೇತನ ಶಿಬಿರ" ದಲ್ಲಿ "ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಕಾನೂನು ಮತ್ತು ತಡೆಯುವಲ್ಲಿ ಜಾಗ್ರತೆ" ಕುರಿತಾಗಿ ಮಾತನಾಡುವ ಅವಕಾಶ ನನ್ನದಾಗಿತ್ತು.

ಪ್ರಸ್ತುತ ಸಮಾಜದಲ್ಲಿ ನೆಡೆಯುತ್ತಿರುವ ಅನೇಕ ರೀತಿಯ ಸಾಮಾಜ ಘಾತುಕ ಘಟನೆಗಳನ್ನು ನೋಡಿದಾಗ ಮನಸ್ಸು ಗಲಿವಿಲಿಗೊಳ್ಳುತ್ತದೆ. ಒಂದು ಕಡೆ ದೇಶದ ಬಾಹ್ಯ ಸವಾಲುಗಳ ನಡುವೆ ದೇಶದ ಆಂತರಿಕ ಸಮಸ್ಯೆಗಳು ನಮ್ಮ ಸಮಾಜವನ್ನು ಇನ್ನಿಲ್ಲದಂತೆ ಹಿಪ್ಪಿ ಹಿಂಡುತ್ತಿವೆ. ಅದರಲ್ಲೂ ವಿಶೇಷವಾಗಿ ಇತ್ತೀಚಿನ ದಿನಗಳಲ್ಲಂತು ಮಕ್ಕಳು ಮತ್ತು ಮಹಿಳೆಯರ ಮೇಲಿನ ಅನಾಹುತಕಾರಿ ದೌರ್ಜನ್ಯಗಳನ್ನು ಪದೇಪದೆ ಸಾಮಾಜಿಕ ಮಾಧ್ಯಮಗಳಲ್ಲಿ ನೋಡುತ್ತಲೆ ಇರುತ್ತೇವೆ. ಇಂತಹ ಘಟನೆಗಳು ನಮ್ಮ ನಿಮ್ಮಗಳ ಮಧ್ಯಯೇ ನೆಡೆದರೂ ಕಂಡೂ ಕಾಣದಂತೆ ಸುಮ್ಮನಾಗಿ ಬಿಡುತ್ತಿದ್ದೇವೆ. ಒಂದು ರೀತಿಯಲ್ಲಿ ಇದೆಲ್ಲ ಸಹಜವೆನ್ನುವಂತಾಗಿದೆ. ಇಂತಹ ಸಮಾಜ ಘಾತುಕ ಘಟನೆಗಳು ಕಂಡಾಗ ಕೊನೆಯ ಪಕ್ಷ ಇವುಗಳನ್ನು ಖಂಡಿಸುವಷ್ಟಾದರೂ ಬದ್ದತೆಯನ್ನು ನಾವು ತೋರಬೇಕಲ್ಲವೆ? ಅವುಗಳಿಗೆ ಸಂಬಂದಿಸಿದ ಕಾನೂನ ಸಹಕಾರ, ರಕ್ಷಣೆ ಮುಂತಾದ ವಿಚಾರಗಳನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತ್ಯವ್ಯವಾಗಬೇಕಲ್ಲವೆ? ಕೊನೆಯ ಪಕ್ಷ ಇಂತಹ ಘಟನೆಗಳು ಘಟಿಸಿದಾಗ ಒಂದು ಸಾಂದರ್ಭಿಕ ಧ್ವನಿ, ಒಂದು ಪ್ರತಿಭಟನೆ, ಒಂದು ಅಂತಕರಣ ತುಂಬಿದ ಪ್ರತಿಸ್ಪಂದನೆ ನಮ್ಮಿಂದ ಹೊರಡಬೇಕಲ್ಲವೆ?

ಇಂತಹ ಹತ್ತಾರು ಅಂಶಗಳನ್ನು ಕೇಂದ್ರಿಕರಿಸಿ ಅದರಲ್ಲೂ ಪ್ರೌಡ ಶಿಕ್ಷಣವನ್ನು ಮುಗಿಸಿ ಕಾಲೇಜು ಹಂತಕ್ಕೆ ಕಾಲಿಡುತ್ತಿರುವ ಮಕ್ಕಳಿಗಾಗಿ, ತಾವು ಬೆಳೆದ ಊರುಗಳನ್ನು ಬಿಟ್ಟು ಉನ್ನತ ಶಿಕ್ಷಣವನ್ನು ಹುಡುಕುತ್ತಾ ನಗರಗಳ ಕಡೆಗೆ ಮುಖ ಮಾಡುವ ಯುವತೀಯರಿಗಾಗಿಯೇ ಆಯೋಜಿಸಿದ್ದ ಈ ಚೇತನ ಶಿಬಿರ ಪ್ರತಿಯೊಬ್ಬರಿಗೂ ಒಂದು ಮಾದರಿ ಮತ್ತು ಅಗತ್ಯ ಕಾರ್ಯಚಟುವಟಿಕೆ ಎನಿಸಿದ್ದು ಸುಳ್ಳಲ್ಲ. ಇದರ ಭಾಗವಾಗಿ "ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಕಾನೂನು, ತಡೆಯುವಲ್ಲಿ ಜಾಗ್ರತೆ" ಯ ಕುರಿತಾಗಿ ತಿಳಿದುಕೊಳ್ಳಲು ಸಾಕಷ್ಟು ವಿಷಯವಿದ್ದರೂ ಪ್ರತಿಯೊಬ್ಬ ಮಗುವು ಕನಿಷ್ಟ ಕೆಲ ಅಂಶಗಳನ್ನು ತಿಳಿದಿರುವುದು ಅವಶ್ಯಕ. ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಕೇವಲ ಮನೆಗಳಿಗೆ ಮಾತ್ರ ಸೀಮಿತವಾಗಿರದೆ, ಶಾಲೆ, ಸಮಾಜ ಮತ್ತು ವೃತ್ತಿ ನಿರತ ಕ್ಷೇತ್ರಗಳಲ್ಲೂ ತನ್ನ ಕಬಂದ ಬಾಹುಗಳನ್ನು ಚಾಚಿಕೊಂಡಿರುವುದು ಕಂಡುಬರುತ್ತಿದೆ.

ಸರಿ ಹಾಗಾದರೆ ನಾವು ಈಗಾಗಲೆ ನೋಡಿದಂತೆ ನಮ್ಮ ಸಮಾಜದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳನ್ನು ಸಾಕ್ಷಿಕರಿಸುವಂತೆ ಹಲವಾರು ಘಟನೆಗಳನ್ನು ನಾವು ಪ್ರತಿನಿತ್ಯ ನೋಡುತ್ತಲೆ ಇದ್ದೇವೆ. ಅವುಗಳೆಲ್ಲವೂ ನಮ್ಮ ಮಧ್ಯಯೇ ನೆಡೆಯುತ್ತಿರುವುದರಿಂದ ನಮ್ಮ ಮಕ್ಕಳಿಗೆ ದೌರ್ಜನ್ಯ ನೆಡೆಯಬಹುದಾದ ವಿವಿಧ ಸಂದರ್ಭಗಳು ಯಾವವು ಎನ್ನುವುದು ಗೊತ್ತಾಗಬೇಕಲ್ಲವೆ.

**ಮಹಿಳೆಯರ ಮೇಲೆ ದೌರ್ಜನ್ಯ ನೆಡೆಯಬಹುದಾದ ಸಂದರ್ಭಗಳು :–**

1. ಸಾರ್ವಜನಿಕವಾಗಿ ನೆಡೆಯುವ ಹಿಂಸೆ.
2. ಕೌಟಂಬಿಕ ಹಿಂಸೆ.
3. ಉದ್ಯೂಗ ಸ್ಥಳದಲ್ಲಿ ನೆಡೆಯುವ ಹಿಂಸೆ.

### ಮಕ್ಕಳ ಮೇಲಿನ ಹಲವು ರೀತಿಯ ದೌರ್ಜನ್ಯ/ಹಿಂಸೆಗಳು ನೆಡೆಯಬಹುದಾದ ಸಂದರ್ಭಗಳು:

ಕುಟುಂಬದಲ್ಲಿ, ಶಾಲೆಯಲ್ಲಿ, ಸಾರ್ವಜನಿಕವಾಗಿ, ಸಶಸ್ತ್ರ ಸಂಘರ್ಷದ ಸಂದರ್ಭಗಳಲ್ಲಿ ಗಡಿಗಳನ್ನು ಮೀರಿ ವಿವಿಧ ಸಂದರ್ಭಗಳಲ್ಲಿ, ನಿಂದನೆ ಮತ್ತು ನಿರ್ಲಕ್ಷ್ಯ, ಅಗಮ್ಯ ಲೈಂಗಿಕತೆ, ಲೈಂಗಿಕ ದೌರ್ಜನ್ಯ, ಶಿಶುಹತ್ಯೆ ಇತ್ಯಾದಿ.

ಒಮ್ಮೆ ಗಮನಿಸಿ ನೋಡಿದಾಗ ಇವೆಲ್ಲ ಸನ್ನಿವೇಷಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ನಿಮ್ಮೆಲ್ಲರ ಪಾಲ್ಗೊಳ್ಳುವಿಕೆ ಇದ್ದೇ ಇರುತ್ತದೆ ಎಂದಾದ ಮೇಲೆ ಈ ದೌರ್ಜನ್ಯಗಳು ಯಾರಿಂದ ನೆಡೆಯುತ್ತವೆ ಎನ್ನುವುದನ್ನು ಗಮನಿಸಿದಾಗ, ನಮ್ಮ ಈ ಪ್ರಜ್ಞಾವಂತ ಸಮಾಜವೇ ಇದಕ್ಕೆ ಕಾರಣವಾಗಿರುವುದು ಸ್ಪಷ್ಟವಾಗಿರುತ್ತದೆ. ಹಾಗಾದರೆ ಯಾರು ಯಾರಿಂದ ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ ನಡೆಯಬಹುದು:



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

1. ಹೆಚ್ಚಿನ ದೌರ್ಜನ್ಯಗಳು ನಾಲ್ಕು ಗೋಡೆಯ ಮಧ್ಯ ನೆಡೆಯುವವು.
2. ಸಂಬಂಧಿಕರಿಂದ, ಪರಿಚಯಸ್ಥರಿಂದ.
3. ಅಸಾಯಕತೆ ಸನ್ನಿವೇಷಗಳಿಂದ

ಇಲ್ಲಿ ಬಹುಮುಖ್ಯವಾಗಿ ನಮ್ಮದೇ ಸಮಾಜದಲ್ಲಿ, ನಮ್ಮವರಿಂದಲೆ ನಮ್ಮದೇ ಮಕ್ಕಳು ಮತ್ತು ಮಹಿಳೆಯರ ಮೇಲೆ ನಡೆಯುವಂತಹ ಸಾಮಾಜಿಕ ದೌರ್ಜನ್ಯಗಳನ್ನು ಅತ್ಯಂತ ಹೇಯ ಕೃತ್ಯಗಳೆಂದು ಪರಿಗಣಿಸಿ ಸಾಮಾಜಿಕ ಬದ್ದತೆಯನ್ನು ಪ್ರದರ್ಶನ ಮಾಡುವ ನೈತಿಕತೆಯನ್ನು ತೋರಿಸುವಂತಹ ಧೈರ್ಯವನ್ನು ನಾವು ನೀವೆಲ್ಲರೂ ತೋರಿಸಬೇಕಾಗಿದೆ.

ನಮ್ಮ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅವರ ಮೇಲೆ ನೆಡೆಯಬಹುದಾದ ದೌರ್ಜನ್ಯದ/ಹಿಂಸೆಯ ಪ್ರಕಾರಗಳನ್ನು ತಿಳಿಸಿಕೊಡಬೇಕಾಗಿದೆ. ಮಕ್ಕಳಿಗೆ ಮತ್ತು ಮಹಿಳೆಯರಿಗೆ ಇದರ ಅರಿವು ನೀಡುವುದು ಆರೋಗ್ಯವಂತ ಸಮಾಜದ ಅತಿ ಅವಶ್ಯಕ ಜವಾಬ್ದಾರಿ ಕೂಡ. ನಮ್ಮ ಮಕ್ಕಳು ಮಹಿಳೆಯರು ಮುಖ್ಯವಾಗಿ ಈ ಕೆಳಗಿನ ಪ್ರಕಾರಗಳಲ್ಲಿ ತಮಗರಿವಿದ್ದೂ ಮತ್ತು ಅರಿವಿಲ್ಲದಂತೆ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಅದು ದೈಹಿಕ ಹಿಂಸೆ, ಭಾವನಾತ್ಮಕ/ಮಾನಸಿಕ ಹಿಂಸೆ, ಲೈಂಗಿಕ ಹಿಂಸೆ, ಆರ್ಥಿಕ ಹಿಂಸೆಯ ರೂಪದಲ್ಲಿರಬಹುದು. ಇಷ್ಟೆಲ್ಲ ಪ್ರಕಾರಗಳಲ್ಲಿ ನೆಡೆಯುವಂತಹ ಈ ದೌರ್ಜನ್ಯಗಳನ್ನು ಯಾಕೆ ತಡೆಯಬೇಕು ಎನ್ನುವ ಪ್ರಶ್ನೆಯನ್ನೂ ಕೇಳುವಂತಹ ಸಾಮಾಜಕ್ಕೆ, ನಾವು ಕೆಲ ವಿಚಾರಗಳನ್ನು ತಿಳಿಹೇಳುವ ಅವಶ್ಯಕತೆ ಮತ್ತು ಅನಿವಾರ್ಯತೆ ಇಂದಿನ ಸಮಾಜದ ಮೂಲಬೂತ ಬೇಡಿಕೆಯಾಗಬೇಕು. ಪ್ರತಿಯೊಬ್ಬರಿಗೂ ಸಮಾನವಾಗಿ ಬದುಕುವ, ಸಮಾನ ಅವಕಾಶವನ್ನು ಹೊಂದುವ ಪ್ರತಿಯೊಬ್ಬರೂ ಸರಿಸಮವಾಗಿ ತಮ್ಮ ಅನಿಸಿಕೆ ಅಬಿಪ್ರಾಯ ಮತ್ತು ಆಸೆಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿರುವ ಬಗ್ಗೆ ಜಾಗ್ರತೆಯನ್ನು ನೀಡಬೇಕು. ಆಗ ಮಾತ್ರ ಪ್ರಜ್ಞಾವಂತ ಸಮಾಜದಲ್ಲಿ ಏಕೆ ದೌರ್ಜನ್ಯದಂತಹ ಹೇಯ ಕೃತ್ಯಗಳನ್ನು ಮಾಡಬಾರದು ಎನ್ನುವುದು ತಿಳಿಯುತ್ತದೆ. ಏಕೆಂದರೆ ನಮ್ಮ ಸಂವಿದಾನವು ಪ್ರತಿಯೊಬ್ಬರಿಗೂ ಕೆಲವು ಸಮಾನ ಅವಕಾಶ, ಹಕ್ಕು ಮತ್ತು ಜವಾಬ್ದಾರಿ ಹಾಗು ಕರ್ತವ್ಯಗಳನ್ನು ನೀಡಿದೆ.

ಉದಾ: ಅನುಚ್ಚೇದ–14– ಕಾನೂನು ಮುಂದೆ ಎಲ್ಲರೂ ಸಮಾನರು
ಅನುಚ್ಚೇದ–15(1)– ಜನ್ಮಸ್ಥಳ, ಧರ್ಮ, ಜಾತಿ, ಲಿಂಗದ ಆದಾರದ ಮೇಲೆವ್ ತಾರತಮ್ಯ ಮಾಡುವಂತಿಲ್ಲ.
ಅನುಚ್ಚೇದ–15(3)–ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಅವಕಾಶವನ್ನು ಮಾಡಿಕೊಡುವುದು.
ಅನುಚ್ಚೇದ–16– ಸಾರ್ವಜನಿಕ ನಿಯೋಗದ ವಿಷಯದಲ್ಲಿ ಸಮಾನ ಅವಕಾಶ.

ಹೀಗೆ ನಮ್ಮ ಸಂವಿದಾನದ ಮೂಲ ಉದ್ದೇಶ ಮತ್ತು ಆಶಯವನ್ನು ಪಾಲಿಸುವುದು ನಮ್ಮ ಕಾನೂನುಗಳನ್ನು ಪಾಲಿಸುವುದು, ಅವುಗಳಿಗೆ ಬೇಕಾದ ಅವಶ್ಯಕ ಕಾನೂನು ಸಹಾಯ ಮತ್ತು ಸಹಕಾರ ನೀಡುವುದು ನಮ್ಮೆಲ್ಲರ ಹೊಣೆ ಎನ್ನುವುದನ್ನು ಸರಿಯಾಗಿ ಅರ್ಥೈಸುವ ಅಗತ್ಯವಿದೆ.

ಈ ಎಲ್ಲಾ ಮಾನವೀಯ ಆಶಯಗಳನ್ನು, ಸಾಮಾಜಿಕ ಭದ್ರತೆಯನ್ನು, ಸಮಾನ ಅವಕಾಶಗಳನ್ನು, ಸರ್ವರ ಹಿತವನ್ನು ಕಾಪಾಡುವ ಉದ್ದೇಶದಿಂದ ಘನ ಸರಕಾರಗಳು ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಯಲು ಅನೇಕ ಕಾನೂನುಗಳನ್ನು ಜಾರಿಗೊಳಿಸಿದೆ ಅವುಗಳ ಬಗ್ಗೆ ಅರಿವು ಹೊಂದುವುದು ನಮ್ಮೆಲ್ಲರ ಕರ್ತವ್ಯ.

ಉದಾ:– ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯಬಹುದಾದ ಕಾನೂನುಗಳನ್ನು ನೋಡುವುದಾದರೆ
ಐಪಿಸಿ ಕಲಂ 498 ಎ ರಿಂದ 304 ಬಿ ಪ್ರಕಾರ

1. ಕೌಟಿಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005
2. ವರದಕ್ಷಣೆ ನಿಷದ ಕಾಯ್ದೆ–1961, ತಿದ್ದುಪಡಿ–1984.
3. ಅಪರಾಧಿ ಕಾನೂನು ತಿದ್ದುಪಡಿ–2013
4. ಉದ್ಯೂಗ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಶೋಷಣೆ ತಡೆಗಟ್ಟುವಿಕೆ ಕಾಯ್ದೆ–2013.
5. ಮಹಿಳಾ ಅಸಭ್ಯೆ ರೂಪೇಣ(ನಿಷೇದ) ಕಾತ್ದೆ–1986.

### ಮಕ್ಕಳ ಹಕ್ಕುಗಳೊಂದಿಗೆ ವ್ಯವಹರಿಸುವ ಸಾಂವಿಧಾನಿಕ ನಿಬಂಧನೆಗಳು:

ವಿಧಿ 21 : ಬದುಕುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ಒದಗಿಸುತ್ತದೆ.
ವಿಧಿ 21 (ಎ): ರಾಜ್ಯವು ಆರು ರಿಂದ ಹದಿನಾಲ್ಕು ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು.
ವಿಧಿ 24: ಹದಿನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಯಾವುದೇ ಕಾರ್ಖಾನೆ ಅಥವಾ ಗಣಿಯಲ್ಲಿ ಕೆಲಸ ಮಾಡಲು ಅಥವಾ ಯಾವುದೇ ಇತರ ಅಪಾಯಕಾರಿ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ನೇಮಿಸಿಕೊಳ್ಳಬಾರದು.
ವಿಧಿ 39(ಎಫ್): ಮಕ್ಕಳಿಗೆ ಆರೋಗ್ಯಕರ ರೀತಿಯಲ್ಲಿ ಮತ್ತು ಸ್ವಾತಂತ್ರ್ಯ ಮತ್ತು ಘನತೆಯ ಪರಿಸ್ಥಿತಿಗಳಲ್ಲಿ ಅಭಿವೃದ್ಧಿ ಹೊಂದಲು ಅವಕಾಶಗಳು ಮತ್ತು ಸೌಲಭ್ಯಗಳನ್ನು ನೀಡಲಾಗುತ್ತದೆ ಮತ್ತು ಬಾಲ್ಯ ಮತ್ತು ಯುವಕರನ್ನು ಶೋಷಣೆಯಿಂದ ಮತ್ತು ನೈತಿಕ ಮತ್ತು ಭೌತಿಕ ತ್ಯಜಿಸುವಿಕೆಯಿಂದ ರಕ್ಷಿಸಲಾಗುತ್ತದೆ.

ಈ ಎಲ್ಲಾ ಕಾನೂನುಗಳಿಂದ ನಮ್ಮ ಮಹಿಳೆ ಮತ್ತು ಮಕ್ಕಳಿಗೆ ಕಾನೂನು ಸಂರಕ್ಷಣೆ ಮತ್ತು ಸಹಾಯ ದೊರೆಯುತ್ತದೆ.

ಉದಾ: ಉದ್ಯೂಗ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಶೋಷಣೆ ತಡೆಗಟ್ಟುವಿಕೆ ಕಾಯ್ದೆ–2013.
ದೈಹಿಕ ಸ್ಪರ್ಷ, ಮಾತು ಅಶ್ಲೀಲ ಸಾಹಿತ್ಯ, ಚಿತ್ರಗಳನ್ನು ತೋರಿಸುವುದು,ಆಂಗಿಕ ಭಾವ, ಅಸಭ್ಯ ಸಂಜ್ಞೆ, ಆಸೆ, ಒತ್ತಡ ಹೇರುವುದು.
1 – ಆಂತರಿಕ ದೂರು ಸಮಿತಿ 2 – ಸ್ಥಾನಿಕ ದೂರು ಸಮಿತಿಗಳನ್ನು ರಚಿಸಲಾಗುತ್ತದೆ ಇವುಗಳಿಂದ ದೊರೆಯುವ ಸೌಲಭ್ಯಗಳು ಎಂದರೆ ವೈದ್ಯಕೀಯ, ಕಾನೂನು, ವಸತಿ, ಹಣಕಾಸು. ಮಾಹಿತಿ.

ಮಕ್ಕಳ ವಿಷಯದಲ್ಲಿ, ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ, 2018, ಭ್ರೂಣಹತ್ಯೆ (ಭ್ರೂಣದ ವಿರುದ್ಧದ ಅಪರಾಧ), ಶಿಶುಹತ್ಯೆಗಳು (ನವಜಾತ ಮಗುವಿನ ವಿರುದ್ಧದ ಅಪರಾಧ) (0 ರಿಂದ 1 ವರ್ಷ) ಸೆಕ್ಷನ್ 315 ಐಪಿಸಿ, ಆತ್ಮಹತ್ಯೆಗೆ ಪ್ರಚೋದನೆ (ಮಕ್ಕಳ ಆತ್ಮಹತ್ಯೆಗೆ ಇತರ ವ್ಯಕ್ತಿಗಳಿಂದ ಪ್ರಚೋದನೆ) ಐಪಿಸಿ ಸೆಕ್ಷನ್ 305, ಅಪ್ರಾಪ್ತ ಬಾಲಕಿಯರ ಸಂಗ್ರಹಣೆ (ಅಕ್ರಮ ಸಂಭೋಗಕ್ಕೆ ಒತ್ತಾಯಿಸಲು ಅಥವಾ ಪ್ರಲೋಭಿಸಲು ಪ್ರಚೋದನೆಗಾಗಿ): ಸೆಕ್ಷನ್ 366–ಎ ಐಪಿಸಿ.ವೇಶ್ಯಾವಾಟಿಕೆಗಾಗಿ ಹುಡುಗಿಯರನ್ನು ಮಾರಾಟ ಮಾಡುವುದು (ಐಪಿಸಿ ಸೆಕ್ಷನ್ 372). ವೇಶ್ಯಾವಾಟಿಕೆಗಾಗಿ ಹುಡುಗಿಯರನ್ನು ಖರೀದಿಸುವುದು (ಐಪಿಸಿ ಸೆಕ್ಷನ್ 373). ಅತ್ಯಾಚಾರ (ಐಪಿಸಿ ಸೆಕ್ಷನ್ 376), ಅಪಹರಣ ಮತ್ತು ಅಪಹರಣ (ಐಪಿಸಿಯ ಸೆಕ್ಷನ್ 360, 361, 363, 366, 367, 369). ಭಾರತೀಯ ದಂಡ ಸಂಹಿತೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (POCSO ಕಾಯ್ದೆ), 2012 – ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ ಮತ್ತು ಅಶ್ಲೀಲತೆಯಂತಹ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸಲು ಈ ಕಾಯ್ದೆಯನ್ನು ಸ್ಥಾಪಿಸಲಾಗಿದೆ. ಅಪರಾಧಿಗಳಿಗೆ ವಿಚಾರಣೆ ಮತ್ತು ಶಿಕ್ಷೆ ವಿಧಿಸಲು ಮಕ್ಕಳ ಸ್ನೇಹಿ ವ್ಯವಸ್ಥೆಯನ್ನು ಒದಗಿಸಲು ಈ ಎಲ್ಲಾ ಕಾನೂನುಗಳನ್ನು ರಚಿಸಲಾಗಿದೆ.

ಹಾಗೆಯೆ ಅನೇಕ ಸಹಾಯವಾಣಿಗಳನ್ನು ತೆರೆದು ತತಕ್ಷಣಕ್ಕೆ ಅಗತ್ಯ ಮತ್ತು ತುರ್ತುಸೇವೆಯನ್ನು ದಿನದ 24 ಗಂಟೆಗಳಲ್ಲೂ ನೀಡಲು ಸರಕಾರಗಳು ಬದ್ದವಾಗಿವೆ.

ಉದಾ: ಮಕ್ಕಳ ಸಹಾಯವಾಣಿ–1098, ಮಹಿಳಾ ಸಹಾಯವಾಣಿ–1091, ಜಿಲ್ಲಾ ಸಹಾಯವಾಣಿ–1077, ಹಿರಿಯ ನಾಗರಿಕರ ಸಹಾಯವಾಣಿ–1090, ರಾಷ್ಟ್ರೀಯ ತುರ್ತು ಸಹಾಯವಾಣಿ–112, ಅಂತರ್ಜಾಲ ಅಪರಾದ ಸಹಾಯವಾಣಿ–1930.

ಹೀಗೆ ಹತ್ತು ಹಲವಾರು ಕಾನೂನಾತ್ಮಕ ಸಹಾಯವನ್ನು ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಯಲು ಜಾರಿಗೊಳಿಸಲಾಗಿದೆ, ಈ ಎಲ್ಲಾ ಕಾನೂನುಗಳ ಕುರಿತ ಜಾಗ್ರತೆಯನ್ನು, ಅವುಗಳ ಕುರಿತ ಅರಿವನ್ನು ಮೂಡಿಸುವುದು ಸಭ್ಯ ನಾಗರಿಕ ಸಮಾಜದ ಕರ್ತವ್ಯ ಎನ್ನುವುದನ್ನು ಮನಗಾಣಬೇಕಾಗಿದೆ. ಸುರಕ್ಷಿತ, ಆರೋಗ್ಯವಂತ ಸಮಾಜದ ನಿರ್ಮಾಣ ನಮ್ಮೆಲ್ಲರಜವಾಬ್ದಾರಿಎನ್ನುವುದನ್ನುಪ್ರತಿಯೊಬ್ಬರೂಅರ್ಥೈಸಿಕೊಳ್ಳಬೇಕಾಗಿದೆ. ಭವ್ಯ ಭಾರತದ ಪರಿಕಲ್ಪನೆ ಸಾಕಾರಗೊಳಿಸಲು ಎಲ್ಲರೂ ಶ್ರಮಿಸಬೇಕಾಗಿದೆ ಎನ್ನುವ ಆಶಯದೊಂದಿಗೆ ನನಗೆ ತಿಳಿದ ಮಿತಿಯಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದ್ದೇನೆ. "ಕಾನೂನಿನ ವಿಚಾರವಾಗಿರುವುದರಿಂದ ಸಂಬಂದಿಸಿರುವವರೊಂದಿಗೆ ಚರ್ಚಿಸಿಯೇ ಮುಂದುವರಿಯಯಬೇಕು ಎಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತ" ನೆರೆದವರಿಗೆ ನನ್ನ ಧನ್ಯವಾದಗಳು ಎನ್ನುತ್ತಿದ್ದಂತೆ ಚಪ್ಪಳೆಗಳ ಕರತಾಡನದೊಂದಿಗೆ ಆ ದಿನದ ತರಗತಿ ಮುಕ್ತಾಯವಾಯಿತು. ಒಂದಿಡೀ ದಿನ ಸಫಲವಾಯಿತು.

ನಿಮ್ಮ ಸಂದೇಶ ಜಗತ್ತಿನೆಡೆಗೆ, ಜಾಹೀರಾತು ನಿಮ್ಮದು, ಪ್ರಸಾರ ನಮ್ಮದು!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ 1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ಮುದ್ರಿತ ಜಾಹೀರಾತಿಗೆ ಮಾತ್ರ ಶುಲ್ಕ ಡಿಜಿಟಲ್ ಆವೃತ್ತಿ ಉಚಿತ*! ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

ಹಂಪಿ ಟೈಮ್ಸ್ ಇ-ಪೇಪರ್ *conditions apply

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ಉಳ್ಳವರು ಸಾಮೂಹಿಕ ವಿವಾಹದಲ್ಲಿ ಮದುವೆಯಾಗಲಿ

## ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿಕೆ



■ ಹಂಪಿ ಟೈಮ್ಸ್ ಕೊಟ್ಟೂರು

ಶ್ರೀಮಂತರು ತಮ್ಮ ಮಕ್ಕಳ ಮದುವೆಯನ್ನು ಸಾಮೂಹಿಕ ಮದುವೆಯಲ್ಲಿ ಮಾಡಿ, ಸಮಾಜಕ್ಕೆ ಉತ್ತಮ ಸಂದೇಶವನ್ನು ಸಾರುವುದರ ಜೊತೆ ಇತರರಿಗೆ ಮಾದರಿಯಾಗಬೇಕು ಎಂದು ಉಜ್ಜಿಯಿನಿ ಸದ್ಧರ್ಮ ಪೀಠದ ಜಗದ್ಗುರು ಸಿದ್ದಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.


ಪಟ್ಟಣದ ಚಾನುಕೋಟಿ ಮಠದ ಆಶ್ರಮದಲ್ಲಿ ಬುಧವಾರ ಬಸವಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹದ ಸಾನಿಧ್ಯ ವಹಿಸಿ ಆಶೀರ್ವಾಚನ ನೀಡಿದ ಶ್ರೀಗಳು, ಸಾಮೂಹಿಕ ವಿವಾಹದಲ್ಲಿ ಮದುವೆಯಾಗುವುದು ಕನಿಷ್ಠವೆಂಬುದನ್ನು ನೀವೆಲ್ಲರೂ ಮರೆಯಬೇಕು. ಇಲ್ಲಿ ಮದುವೆಯಾಗುವುದು ಪುಣ್ಯ ಕಾರ್ಯ. ಸಾಮಾನ್ಯರಿಂದ ಗಣ್ಯರ ತನಕ ಎಲ್ಲರ ಆಶೀರ್ವಾದವು ಸಿಗುತ್ತದೆ ಎಂದುರು.

ಡೋಣೂರು ಚಾನುಕೋಟಿ ಮಠ ಸತತ 35 ವರ್ಷಗಳಿಂದಲೂ ಸಾಮೂಹಿಕ ವಿವಾಹಗಳನ್ನು ಮಾಡುತ್ತಾ ಬಂದಿದೆ. ಇಲ್ಲಿ ಮದುವೆಯಾಗಿ ಸೊಸೆಯಾಗಿ ಹೋಗುವ ಹೆಣ್ಣುಮಗಳು, ಮನೆ ಒಡೆಯದೆ, ಅತ್ತೆ, ಮಾವ ಅವರನ್ನು ತಂದೆ ತಾಯಿ ಸ್ಥಾನದಲ್ಲಿಟ್ಟು ಸಂಸ್ಕಾರವನ್ನು ಮುನ್ನಡೆಸಿದಾಗ ಮಾತ್ರ ತವರು ಮನೆಗೆ ಹಾಗೂ ಹೆತ್ತವರಿಗೆ ಕೀರ್ತಿಯನ್ನು ತರಲು ಸಾಧ್ಯ ಎಂದರು.

ಕಾಶ್ಮೀರದಲ್ಲಿನ ಪೆಹಲ್ಗಾಂನಲ್ಲಿ ಜಾತಿಯನ್ನು ಕೇಳಿ ಹತ್ಯೆ ಮಾಡಿರುವುದು ಅತ್ಯಂತ ಹೇಯ ಕೃತ್ಯ, ಮತ್ತೊಮ್ಮೆ ಉಗ್ರಗಾಮಿಗಳು ಭಾರತದತ್ತ ತಿರುಗಿ ನೋಡದಂತೆ ಹೊಡೆತ ಕೊಡಬೇಕು. ನಮ್ಮ ದೇಶದಲ್ಲಿರುವ ವಲಸೆಗಾರರನ್ನು ನಿರ್ಧಾಕ್ಷ್ಯಣ್ಯವಾಗಿ ಹೊರದೂಡಬೇಕು ಎಂದರು.

ಸಾಮಾಹಿಕ ವಿವಾಹದಲ್ಲಿ 12 ಜೋಡಿಗಳು ಹೊಸ ಬಾಳಿಗೆ ಪಾದಾರ್ಪಣೆ ಮಾಡಿದರು. 25 ಜಂಗಮ ವಟುಗಳಿಗೆ ಜಂಗಮ ದೀಕ್ಷೆ ನೀಡಲಾಯಿತು. ಡೋಣೂರು ಚಾನುಕೋಟಿ ಮಠದ ಡಾ. ಸಿದ್ದಲಿಂಗ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಜಿ.ಪಂ. ಮಾಜಿ ಉಪಾಧ್ಯಕ್ಷ ದೊಡ್ಡರಾಮಣ್ಣ, ಜಿಪಂ ಮಾಜಿ ಸದಸ್ಯ ಹರ್ಷವರ್ಧನ, ಕರಡಿ ಕೊಟ್ರಯ್ಯ, ಜೆಸ್ಕಾಂ ಎಇಇ ನಾಗರಾಜ್, ಡಾ. ವಿಜಯಕುಮಾರ್, ಪಪಂ ಅಧ್ಯಕ್ಷೆ ಬದ್ದಿರೇಖಾ, ಉಪಾಧ್ಯಕ್ಷ ಸಿದ್ದಯ್ಯ, ಸದಸ್ಯ ವೀಣಾ ವಿವೇಕಾನಂದಗೌಡ, ಕೆಂಗರಾಜ್ ಇತರರಿದ್ದರು.



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 30–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.26 ಅಡಿ |
| ಒಳ ಹರಿವು | 228 ಕ್ಯುಸೆಕ್ |
| ಹೊರ ಹರಿವು | 334 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.852 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.14 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 305 ಕ್ಯುಸೆಕ್ |
| ಸಾಮರ್ಥ್ಯ | 3.631 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

01–05–2025 – ಗುರುವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಅತಿಗಂಡ |
| ಕರಣ | : ಸುಕರ್ಮ |
| ಸೂರ್ಯೋದಯ | : 05:54:58 |
| ಸೂರ್ಯಾಸ್ತ | : 18:53:20 |
| ರಾಹು ಕಾಲ | : 14:01–15:39 |
| ಯಮಘಂಡ ಕಾಲ | : 05:55–07:32 |
| ಗುಳಿಕ ಕಾಲ | : 09:10–10:47 |

# ಚೆಸ್ ಬೇಸಿಗೆ ತರಬೇತಿ ಶಿಬಿರ ಮತ್ತು ರಾಜ್ಯ ಮಟ್ಟದ ಚೆಸ್ ಸ್ಪರ್ಧೆ: ಹೆಸರು ನೋಂದಾಯಿಸಿ

**ಹಂಪಿ ಟೈಮ್ಸ್ ಕೊಪ್ಪಳ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ಜಿಲ್ಲೆಯ ಯುವ ಕ್ರೀಡಾಪಟುಗಳಿಗೆ ಹಾಗೂ ಬಾಲಕ, ಬಾಲಕಿಯರಿಗೆ ಚೆಸ್ ಬೇಸಿಗೆ ತರಬೇತಿ ಶಿಬಿರ ಮತ್ತು 2025ನೇ ಸಾಲಿನ ರಾಜ್ಯ ಮಟ್ಟದ ಚೆಸ್ ಸ್ಪರ್ಧೆಗೆ ಆಯ್ಕೆ ಪ್ರಕ್ರಿಯೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯ ಯುವ ಕ್ರೀಡಾಪಟುಗಳಿಗೆ ಹಾಗೂ ಬಾಲಕ, ಬಾಲಕಿಯರಿಗೆ ಮಾನಸಿಕ ಸಾಮರ್ಥ್ಯ ಹೊಂದುವ ಹಿತದೃಷ್ಟಿಯಿಂದ ಹಾಗೂ ಚೆಸ್‌ನಲ್ಲಿ ಸಾಧನೆ ಮಾಡುವ ದೃಷ್ಟಿಯಿಂದ ಮೇ. 4 ರಂದು ಕೊಪ್ಪಳ ಜಿಲ್ಲಾ ಕ್ರೀಡಾಂಗದಲ್ಲಿ ಚೆಸ್ ತರಬೇತಿ ಶಿಬಿರ ಏರ್ಪಡಿಸಲಾಗಿದ್ದು, ಚೆಸ್ ಸ್ಪರ್ಧೆಗೆ ಭಾಗವಹಿಸುವ ಆಸಕ್ತರು ಮೇ.2 ರ ಒಳಗಾಗಿ ದೂರವಾಣಿ ಮುಖಾಂತರ ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬಹುದಾಗಿದೆ.

**ನಿಬಂಧನೆಗಳು:** ಚೆಸ್ ತರಬೇತಿ ಶಿಬಿರದ ಪ್ರವೇಶ ಶುಲ್ಕ ರೂ.200 ಆಗಿದ್ದು, ಚೆಸ್ ತರಬೇತಿ ಶಿಬಿರವು ಅಂದು ಬೆಳಿಗ್ಗೆ 9 ರಿಂದ ಬೆಳಿಗ್ಗೆ 11 ಗಂಟೆಯವರೆಗೆ ನಡೆಸಲಾಗುವುದು. ನಂತರ ಮಧ್ಯಾಹ್ನ 12 ಗಂಟೆಯಿಂದ ಚೆಸ್ ಸ್ಪರ್ಧೆ ಪ್ರಾರಂಭವಾಗುವುದು. ವಿಜೇತರಾದ ಸ್ಪರ್ಧಾಳುಗಳನ್ನು ಮುಂಬರುವ ದಿನಗಳಲ್ಲಿ 2025ನೇ ರಾಜ್ಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ಚೆಸ್ ಸ್ಪರ್ಧೆಯಲ್ಲಿ ಭಾಗವಹಿಸಲು ವಯೋಮಿತಿ 7, 9, 11, 15, 17, 19, ವರ್ಷದೊಳಗಿನ ಬಾಲಕ/ ಬಾಲಕಿಯರಿಗೆ ಅವಕಾಶವಿರುತ್ತದೆ. ದೂರವಾಣಿ ಮೂಲಕ ಮುಂಚಿತವಾಗಿ ನೋಂದಣಿಯಾದ 100 ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ಸ್ಪರ್ಧಾಳುಗಳು ಸಮಯಕ್ಕೆ ಸರಿಯಾಗಿ ಹಾಜರಿರಬೇಕು. ನಿರ್ಣಾಯಕರ ನಿರ್ಣಯಕ್ಕೆ ಬದ್ದರಾಗಿರಬೇಕು ಮತ್ತು ನಿರ್ಣಾಯಕರ ನಿರ್ಣಯವೇ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕ್ರೀಡಾ ಇಲಾಖೆ ಕಛೇರಿ ಸಿಬ್ಬಂದಿಗಳಾದ ಆರ್.ತುಕಾರಾಮ್ ಮೊ.ಸಂ: 8197398600, ದೀಪಾ ಮೊ.ಸಂ: 8088143003 ಹಾಗೂ ಕಛೇರಿ ದೂರವಾಣಿ ಸಂಖ್ಯೆ: 08539–230121 ಗೆ ಸಂಪರ್ಕಿಸುವಂತೆ ಕೊಪ್ಪಳ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ್ ತಿಳಿಸಿದ್ದಾರೆ.

# ಬಸವಣ್ಣನವರ ಬದುಕು ಎಲ್ಲರಿಗೂ ಆದರಣೀಯ

## ತಹಶೀಲ್ದಾರ ಅಮರೇಶ ಜಿ.ಕೆ ಹೇಳಿಕೆ | ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಣೆ



■ ಹಂಪಿ ಟೈಮ್ಸ್ ಕೊಟ್ಟೂರು

ಸಮಸಮಾಜ ನಿರ್ಮಾಣ ಮಾಡಿದ ಬಸವಣ್ಣನವರ ಬದುಕು ಎಲ್ಲರಿಗೂ ಆದರಣೀ ಯವಾಗಿದೆ. ಅವರ ಆದರ್ಶವನ್ನು ನಾವೆಲ್ಲರೂ ಪಾಲಿಸೋಣ ಎಂದು ತಹಶೀಲ್ದಾರ ಅಮರೇಶ ಜಿ.ಕೆ ಹೇಳಿದರು.

ಕೊಟ್ಟೂರು ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ವಿಶ್ವಗುರು, ಸಾಂಸ್ಕೃತಿಕ ನಾಯಕ, ಜಗಜ್ಯೋತಿ ಬಸವೇಶ್ವರರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ತಹಶಿಲ್ದಾರ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಪ್ರೊ. ಡಾ॥ ಮಹಬಲೇಶ್ವರಪ್ಪ ಇವರು ಬಸವಣ್ಣನವರು ಜಾತಿಗೆ ಸೀಮಿತಗೊಳ್ಳದೇ ಕಾಯಕಕ್ಕೆ ಬೆಲೆ ಕೊಟ್ಟರು, ಪ್ರತಿಯೊಬ್ಬರು ಸತ್ಯಶುದ್ಧ ಕಾಯಕವನ್ನು ಮಾಡಬೇಕು. ಕಾಯಕದಿಂದ ಬಂದದ್ದರಲ್ಲಿ ಹೆಚ್ಚಿನದನ್ನು ದಾಸೋಹದ ಮೂಲಕ ಸಮಾಜಕ್ಕೆ ಹಂಚಬೇಕು ಎನ್ನುವ ತತ್ವವನ್ನು ಜಾರಿಗೆ ತಂದರು.

ದೇವರು ಮತ್ತು ಭಕ್ತರ ಮಧ್ಯೆ ಇದ್ದ ಪೂಜಾರಿ ಶೋಷಣೆಯ ಸಂಕೇತವೆಂದು ದೇವಾಲಯ ಸಂಸ್ಕೃತಿಯನ್ನು ತಿರಸ್ಕರಿಸಿ ಅಂಗೈಯಲ್ಲಿ ಇಷ್ಟ ಲಿಂಗವನ್ನು ಕೊಟ್ಟು ಎಲ್ಲರಿಗೂ ದೈವವನ್ನು ಆರಾಧಿಸಲು ಅವಕಾಶ ಕಲ್ಪಿಸಿ, ಜೀವ ಸಂಸ್ಕೃತಿ ಉಳಿಯಬೇಕು, ಊಳಿಗ ಮಾನ್ಯ ಪದ್ಧತಿ, ಬಂಡವಾಳ ಶಾಹಿ ಪದ್ಧತಿ ಅಳಿಯಬೇಕು ಎನ್ನುತ್ತಾ, ಇಡೀ ವಿಶ್ವಕ್ಕೇ "ಪ್ರಜಾಪ್ರಭುತ್ವ" ಪದ್ಧತಿಯನ್ನು ಮೊಟ್ಟ ಮೊದಲು ಪರಿಚಯಿಸಿದರು. ಆ ಮೂಲಕ ಎಲ್ಲರೂ ನಮ್ಮವರು ಎನ್ನುವ ಭಾವನೆಯನ್ನು ಸಮಾಜದಲ್ಲಿ ತಂದರು ಎಂದು ಉಪನ್ಯಾಸ ನೀಡಿದರು.

ಎಪಿಎಂಸಿ ಉಪಾಧ್ಯಕ್ಷರು ಹಾಗೂ ಪಂಚಮ ಸಾಲಿ ಮುಖಂಡರಾದ ಶಿವಣ್ಣನವರು ನಾವೆಲ್ಲರೂ ಬರೀ ಜನ್ಮ ದಿನಾಚರಣೆಗೆ ಸೀಮಿತಗೊಳ್ಳದೇ ಬಸವಣ್ಣನವರ ಆದರ್ಶಗಳನ್ನು ಮೈಗೂಡಿಸಿ ಕೊಳ್ಳಬೇಕೆಂದರು.

ಜಿಲ್ಲಾ ಡಿಎಸ್ಸೆಸ್ ಮುಖಂಡರಾದ ತೆಗ್ಗಿನಕೇರಿ ಕೊಟ್ರೇಶ್ ,ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಯೋಗೀಶ್ವರ ದಿನ್ನೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಮ ಸಾಲಿ ಸಮಾಜದ ಅಧ್ಯಕ್ಷರಾದ ಚಾಪಿ ಚಂದ್ರಪ್ಪ, ತಾಲೂಕು ಜಂಗಮ ಸಮಾಜದ ಅಧ್ಯಕ್ಷರಾದ ಅಡಿಕಿ ಮಂಜುನಾಥ, ತಾಲೂಕು ಕಸಪ ಅಧ್ಯಕ್ಷರಾದ ದೇವರಮನಿ ಕೊಟ್ರೇಶ್, ವಿವಿಧ ಸಮಾಜದ ಮುಖಂಡರು, ಶಿಕ್ಷಣ ಇಲಾಖೆಯ ಇಸಿಒ ನಿಂಗಪ್ಪ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿಗಳಾದ ಶಶಿಕಲಾ, ಕಂದಾಯ ನಿರೀಕ್ಷಕ ಹಾಲಸ್ವಾಮಿ, ಗ್ರಾ.ಆ.ಅ. ಹರೀಶ್, ಸಿಬ್ಬಂದಿ ಮಂಜುನಾಥ, ವಾಲಿ ಮಂಗಳ, ವನಜಾಕ್ಷಿ, ಸೌಭಾಗ್ಯಮ್ಮ , ಭೂಮಾಪಕ ನಾಗರಾಜ ಹಾಗೂ ಇತರರು ಇದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು.

# ಆದರ್ಶಗಳನ್ನು ಅಳವಡಿಸಿಕೊಂಡಾಗ ಆಚರಣೆಗಳು ಅರ್ಥಪೂರ್ಣ



■ ಹಂಪಿ ಟೈಮ್ಸ್ ಬಳ್ಳಾರಿ

ಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ ಅಂಗವಾಗಿ ಬುಧವಾರ ನಗರದ ಹೆಚ್.ಆರ್.ಗವಿಯಪ್ಪ ವೃತ್ತದ ಬಳಿಯ ಬಸವೇಶ್ವರರ ಪುತ್ಥಳಿಗೆ ಜಿಲ್ಲಾಡಳಿತ ವತಿಯಿಂದ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸಾಂಸ್ಕೃತಿಕ ನಾಯಕ ಬಸವೇಶ್ವರರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಮಹಾಮಾನವತಾವಾದಿ ಬಸವೇಶ್ವರರ ಆಚಾರ– ವಿಚಾರಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಜಿಲ್ಲಾಧ್ಯಕ್ಷ ಚಿದಾನಂದಪ್ಪ ಕೆ.ಇ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಅನೇಕರು ಇದ್ದರು.

# ಲೈನ್‌ಮ್ಯಾನ್ ಅಜ್ಜಯ್ಯಗೆ ವಿದ್ಯುತ್ ತಗುಲಿ ಕಂಬದಲ್ಲೇ ಮೃತ

■ ಹಂಪಿ ಟೈಮ್ಸ್ ಕೊಟ್ಟೂರು

ಲೈನ್ ಮ್ಯಾನ್ ಅಜ್ಜಯ್ಯ (29 ವರ್ಷ) ವಿದ್ಯುತ್ ಕಾರ್ಯ ನಿರ್ವಹಣೆ ವೇಳೆ ವಿದ್ಯುತ್ ಪ್ರವಹಿಸಿ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಬುಧವಾರ ತಾಲೂಕಿನ ದೂಪದಹಳ್ಳಿ ಗ್ರಾಮದ ಹೊರವಲಯದಲ್ಲಿ ನಡೆದಿದೆ.

ವಿದ್ಯುತ್ ಕಾರ್ಯ ನಿರ್ವಹಣೆಗೂ ಪೂರ್ವದಲ್ಲಿ ಕೊಟ್ಟೂರು ಕೇಂದ್ರದಿಂದ ಎಲ್.ಸಿ ತೆಗಿದಿರುವುದನ್ನು ಖಚಿತಪಡಿಸಿಕೊಂಡು ಕಾರ್ಯ ನಿರ್ವಹಿಸಿದ್ದಾರೆ. ಇದ್ದಕ್ಕಿದ್ದಂತೆ ವಿದ್ಯುತ್ ಪ್ರವೈಸಿಸಿ ಸ್ಥಳದಲ್ಲಿ ಮೃತಪಟ್ಟರುವುದಾಗಿ ಎಇಇ ನಾಗರಾಜ್ ಮಾಹಿತಿ ನೀಡಿದರು. ಈ ಘಟನೆಗೆ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು ಎಂದು



ತಿಳಿಸಿದ್ದಾರೆ. ಮೃತ ಅಜ್ಜಯ್ಯನ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತ್ತು. ಮೇಲಾಧಿಕಾರಿಗಳ ನಿರ್ಲಕ್ಷ್ಯವೇ ದುರ್ಘಟನೆಗೆ ಕಾರಣ ಎಂದು ಜೆಸ್ಕಾಂ ಅಧಿಕಾರಿಗಳ ವಿರುದ್ಧ ಕುಟುಂಬದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಜನ ಕಂಬನಿ ಮಿಡಿದರು.

# ಕಾಯಕ ಪ್ರೀತಿಸಿ ಅಭಿವೃದ್ಧಿ ಕಾಣಿರಿ

## ಪುರಸಭಾ ಅಧ್ಯಕ್ಷ ಎಂ.ಮರಿರಾಮಪ್ಪ ಹೇಳಿಕೆ | ಬಸವಜಯಂತಿ ಆಚರಣೆ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ಪುರಸಭೆ ಸಭಾಂಗಣದಲ್ಲಿ ಬುಧವಾರ ಜಗಜ್ಯೋತಿ ವಿಶ್ವಗುರು ಬಸವೇಶ್ವರರ 892 ನೇ ಜಯಂತ್ಯೋತ್ಸವದಲ್ಲಿ ಆಚರಿಸಿ, ಪಟ್ಟಣದ ಹೃದಯ ಭಾಗದಲ್ಲಿರುವ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಪುರಸಭೆ ವತಿಯಿಂದ ಮಾಲಾರ್ಪಣೆ ಮಾಡಲಾಯಿತು.

ಪುರಸಭಾ ಅಧ್ಯಕ್ಷ ಎಂ.ಮರಿರಾಮಪ್ಪ ಮಾತನಾಡಿ, ಸಮಾನತೆಯ ಹರಿಕಾರ, ಕಾಯಕದಿಂದಲೇ ಕೈಲಾಸ ಎಂಬುದನ್ನು ಸಾರಿದ ಮಹಾನ್ ಮಾನವತಾವಾದಿ ವಿಶ್ವಗುರು ಬಸವಣ್ಣನವರ ಸರಳ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಂಡು ನಡೆಯಬೇಕು. ಬಸವಣ್ಣನವರ ಪ್ರತಿಯೊಂದು ವಚನಗಳನ್ನು ಅರ್ಥೈಸಿಕೊಂಡು ಬದುಕಿದರೆ ಬದುಕು ಸುಂದರವಾಗಲಿದೆ. ಕಾಯಕನಿಷ್ಠೆಯಿಂದ ಮಾತ್ರ ಅಭಿವೃದ್ಧಿ ಎಂಬುದನ್ನು ಎಲ್ಲರೂ ನೆನೆದು, ತಮ್ಮ ತಮ್ಮ ಕಾಯಕವನ್ನು ಪ್ರೀತಿಸಬೇಕು ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಅಂಬಿಕಾ ದೇವೇಂದ್ರಪ್ಪ, ಸದಸ್ಯರಾದ ಆಜೀಜುಲ್ಲಾ, ಅಲ್ಲಾಭಕ್ಷಿ, ಜಿ.ಹನುಮಂತಪ್ಪ, ಕಮಲಮ್ಮ, ಚೆನ್ನಮ್ಮ ಚಿಂತ್ರಪಲ್ಲಿ ದೇವೇಂದ್ರಪ್ಪ, ಮಂಜುನಾಥ್, ಸೆರೆಗಾರ್ ಹುಚ್ಚಪ್ಪ, ತ್ಯಾವಣಿಗೆ ಕೊಟ್ರೇಶ್, ಬಡ್ಲಡಕಿ ಕೃಷ್ಣಪ್ಪ ಹಾಗೂ ಪುರಸಭಾ ಮುಖ್ಯಾಧಿಕಾರಿ ಪ್ರಭಾಕರ ಎಂ ಪಾಟೀಲ, ಕಛೇರಿ ವ್ಯವಸ್ಥಾಪಕ ಚಂದ್ರಶೇಖರ, ಕಂದಾಯ ಅಧಿಕಾರಿ ಮಾರಪ್ಪ, ಎಂ. ಬಸವರಾಜ್ ಹಾಗೂ ಕಛೇರಿಯ ಸಿಬ್ಬಂದಿ ಇದ್ದರು.

# ಬಸವ ಜಯಂತಿ ಜೋಡೆತ್ತುಗಳ ಮೆರವಣಿಗೆ



■ ಹಂಪಿ ಟೈಮ್ಸ್ ಕೂಡ್ಲಿಗಿ

ಪಟ್ಟಣದ ಪೇಟೆ ಬಸವೇಶ್ವರ ದೇವಸ್ಥಾನದ ದೈವಸ್ಥರಿಂದ ಬುಧವಾರ ಬಸವೇಶ್ವರ ದೇವಸ್ಥಾನದಲ್ಲಿ ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನ ಜಯಂತಿಯನ್ನುಅದ್ದೂರಿಯಾಗಿಆಚರಿಸಲಾಯಿತು. ಆರಂಭದಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ಬಸವಣ್ಣ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ಎತ್ತಿನ ಗಾಡಿಯಲ್ಲಿ ಬಸವಣ್ಣ ಅವರ ಭಾವಚಿತ್ರನ್ನಿಟ್ಟುಕೊಂಡು 50ಕ್ಕೂ ಹೆಚ್ಚು ಜೋಡಿ ಎತ್ತುಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಇದಕ್ಕೂ ಮೊದಲು ಪೇಟೆ ಬಸವೇಶ್ವರ ದೇವಸ್ಥಾನದ ಬಳಿ ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಅವರು ಮೆರವಣಿಗೆಗೆ ಚಾಲನೆ ನೀಡಿದರು.

ಹಿ.ಮ. ಚಿದಾನಂದಸ್ವಾಮಿ, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಕಾವಲ್ಲಿ ಶಿವಪ್ಪ ನಾಯಕ, ತುಪ್ಪಳ್ಳಿ ಮೂಗಣ್ಣ, ಸೋಗಿ ಗುರುಸಿದ್ದಪ್ಪ, ಕಾಯಿಕೆಡುವ ವಿಜಯಕುಮಾರ್, ಮಹೇಶ್, ಗುರು, ಹುಗ್ಗಿ ಬಸವರಾಜ, ವೀರಣ್ಣ, ಶಿವಲಿಂಗ, ಕೋಗಳಿ ಮಂಜುನಾಥ, ಕೊಡದೀರಪ್ಪ, ವಿಭೂತಿ ಈರಣ್ಣ, ಬಣಕಾರ ಕೊಟ್ರೇಶ್, ಬ್ಯಾಳಿ ವಿಜಯಕುಮಾರ್, ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಗೌಡ್ರು ಸುನಿಲ್, ಎಂ. ಗುರುಸಿದ್ದನಗೌಡ, ಟಿ.ಜಿ. ಮಲ್ಲಿಕಾರ್ಜುನ ಗೌಡ, ಗುಳಿಗಿ ವೀರೇಂದ್ರ, ಎಚ್. ರೇವಣ್ಣ, ಗಿರೀಶ್ ಪಾಲ್ಗೊಂಡಿದ್ದರು.